
# ಡಾ. ಬಿ.ಎಸ್. ಗದ್ದಗಿ ಮಠ

ವ್ಯಕ್ತಿ ಪರಿಚಯ



ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು

ಡಾ. ಸಿ.ಕೆ. ನಾವಲಗಿ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೧೦

# ಡಾ. ಬಿ.ಎಸ್. ಗದ್ದಗಿಮಠ

ವ್ಯಕ್ತಿ ಪರಿಚಯ

ಡಾ. ಸಿ. ಕೆ. ನಾವಲಗಿ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ
ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

**DR. B.S. GADDAGIMATHA**
A pen portrait - by DR. C.K. NAVALAGI.
Published by : KARNATAKA JANAPADA PARISHATH.
No.1, Jaladarshini Layout, Near M.S. Ramaiah Hospital Gate,
New B.E.L. Road, Bangalore - 560 054.
Pages : 32 Price : Rs.10 2008.

ಪ್ರಥಮ ಮುದ್ರಣ : ೨೦೦೮

ಪ್ರತಿಗಳು ೨೦೦೦

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿ)





ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆಯೂ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಪ್ರಸಿದ್ಧ ವಿದ್ವಾಂಸರಾದ **ಡಾ. ಸಿ. ಕೆ. ನಾವಲಗಿ** ಅವರು **ಡಾ. ಬಿ.ಎಸ್. ಗದ್ದಗಿಮಠ** ರವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಬೆಂಗಳೂರು
೦೨-೦೨-೨೦೦೮

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

# ಡಾ. ಬಿ.ಎಸ್. ಗದ್ದಗಿಮಠ

**೧. ಬಾಲ್ಯ–ಶಿಕ್ಷಣ–ಉದ್ಯೋಗ :** ಬಿ.ಎಸ್. ಗದ್ದಗಿಮಠ ಅವರ ಪೂರ್ಣ ಹೆಸರು ಡಾ. ಬಸಯ್ಯ ಸಾವಳಿಗೆಯ್ಯ ಗದ್ದಗಿಮಠ. ತಾಯಿಯ ಹೆಸರು ಶಿವಗಂಗಾದೇವಿ. ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕೆರೂರ ಗ್ರಾಮದಲ್ಲಿ ಪ್ರ.ವ. 1917ರಲ್ಲಿ ಡಾ. ಬಿ.ಎಸ್. ಗದ್ದಗಿಮಠ ಹುಟ್ಟಿದರು. ಧರ್ಮಾವಲಂಬಿಗಳಾದ ತಂದೆ–ತಾಯಿಗಳದು ಕೃಷಿಕ ಮನೆತನ. ಗದ್ದಗಿಮಠರು ತಮ್ಮ ಪ್ರಾಥಮಿಕ ಶಿಕ್ಷಣದ ಕೆಲವು ತರಗತಿಗಳನ್ನು ಹುಟ್ಟಿದೂರಿನಲ್ಲಿ ಪೂರೈಸಿ, ಮುಂದಿನ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬಾಗಲಕೋಟೆಯಲ್ಲಿ ಮುಗಿಸಿದರು. ಗುರುವಿಗೆ ಆಜ್ಞಾಧಾರಕ ವಿದ್ಯಾರ್ಥಿಯಾಗಿ ಆತ್ಮೀಯ ಸಂಬಂಧವನ್ನಿರಿಸಿಕೊಂಡು ಅವರಿಂದ ಅವಿರಳ ಜ್ಞಾನ ಸಂಪಾದಿಸುತ್ತಿದ್ದರು. ತಮ್ಮ ಶಾಲೆಯ ಹೆಸರಾಂತ ಮುಖ್ಯೋಪಾಧ್ಯಾಯ ಡಾ. ಡೇ ಅವರ ಮೆಚ್ಚಿನ ವಿದ್ಯಾರ್ಥಿಯಾಗಿ, ಅವರಿಂದ ಹಲವಾರು ಶೈಕ್ಷಣಿಕ ಅನುಕೂಲತೆಗಳನ್ನು ಪಡೆದುಕೊಂಡಿದ್ದರು. ತಮ್ಮ ಮಾವಂದಿರಾದ ಶ್ರೀ ವಸ್ತ್ರದ ಅವರಿಂದ ಧನಸಹಾಯವನ್ನು ಪಡೆದಿದ್ದರು. ಇವರೆಲ್ಲರ ಸಹಾಯ ಸಹಕಾರವನ್ನು ಅತ್ಯಂತ ಜಾಣತನದಿಂದ ಪಡೆದು ಹುಚ್ಚುಹಿಡಿದವರಂತೆ ಓದಿ ಆದರ್ಶವಿದ್ಯಾರ್ಥಿಯಾಗಿ, ಸಂಬಂಧಿಸಿದವರೆಲ್ಲರ ಪ್ರೀತಿ–ವಿಶ್ವಾಸಕ್ಕೆ ಗದ್ದಗಿಮಠ ಪಾತ್ರರಾಗಿದ್ದರು. ಕಾಲೇಜು ಶಿಕ್ಷಣಕ್ಕೆ ಬೆಳಗಾವಿಯ ಲಿಂಗರಾಜ ಕಾಲೇಜಿಗೆ ಕಷ್ಟಪಟ್ಟು ಸೇರಿದರು. ಮನೆಯಲ್ಲಿ ಕಿತ್ತುತಿನ್ನುವ ಬಡತನ ಓದಿಗೆ ಆತಂಕವನ್ನುಂಟುಮಾಡಿತು. ಛಲವಾದಿ, ಹುಟ್ಟುಹೋರಾಟಗಾರ ಗದ್ದಗಿಮಠ ಧೈರ್ಯಗುಂದಲಿಲ್ಲ. ಲಿಂಗಾಯತ ಬೋರ್ಡಿಂಗ್‌ನಲ್ಲಿ ಉಚಿತ

ಊಟ ಹಾಗೂ ವಸತಿ ಸೌಕರ್ಯ ಮಾಡಿಕೊಂಡರು. ಕಷ್ಟಗಳನ್ನು ಎದುರಿಸುತ್ತಲೇ ಬಿ.ಎ. ಪದವಿ (1943) ಯನ್ನು ಪಡೆದರು. ಕಾಲೇಜು ಪ್ರಾಧ್ಯಾಪಕರ ಸಾಮೀಪ್ಯವನ್ನು ಪಡೆದು, ಅವರ ಮನೆವರೆಗೂ ಸಂಪರ್ಕ ಬೆಳೆಸಿ, ಆತ್ಮೀಯ ಶಿಷ್ಯವತ್ಸಲರಾಗಿ ಅವರ ಮನಸ್ಸನ್ನು ಗೆದ್ದರು. ಅಧಿಕ ಅಂಕಗಳಿಸಿ ಶಿಷ್ಯವೇತನ ಪಡೆದು ಪ್ರತಿಭಾವಂತ ವಿದ್ಯಾರ್ಥಿ ಎನಿಸಿದರು. ಉನ್ನತ ಶಿಕ್ಷಣಕ್ಕೆ ಬಡತನ ಅಡ್ಡಗೋಡೆಯಾದುದರಿಂದ, ಬಾಗಲ ಕೋಟೆ ಬಸವೇಶ್ವರ ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಕ (Physical Instructor) ಸೇವೆಗೆ ಸೇರಿದರು. ಅದು ಉಪಜೀವನಕ್ಕೆ ದಾರಿಯಾಯಿತು. ಇಲ್ಲಿರುವಾಗಲೇ ಐಹೊಳೆ, ಪಟ್ಟದಕಲ್ಲು, ಬಾದಾಮಿ, ವಿಜಾಪುರಗಳಲ್ಲಿಯ ಶಿಲ್ಪಕಲೆಯನ್ನು ಅಭ್ಯಸಿಸಿದರು. ದೈಹಿಕ ಶಿಕ್ಷಣದಲ್ಲಿ ವಿಶೇಷ ತರಬೇತಿಗಾಗಿ ಮುಂಬಯಿಯ ಖಾಂದೇವಾಲಿಗೆ ಬಂದರು. ಗದ್ದಗಿಮಠರು ನಿಷ್ಠುರ ಸ್ವಭಾವದವರು; ತಮ್ಮ ಮನಸ್ಸಿನ ವಿರುದ್ಧ ಯಾರೊಂದಿಗೂ ಕಾಂಪ್ರೊಮೈಜ್ ಮಾಡಿಕೊಳ್ಳುವವರಲ್ಲ. ಹುಲ್ಲಾಗಿ ಬಾಗುವುದಕ್ಕಿಂತ ಗಳವಾಗಿ ಮುರಿಯುವುದೇ ಲೇಸೆಂದು ನಂಬಿ ನಡೆದವರು. ಬಸವೇಶ್ವರ ಹೈಸ್ಕೂಲಿನ ಸಂಸ್ಥೆಯವರೊಂದಿಗೆ ಭಿನ್ನಾಭಿಪ್ರಾಯ ಬಂದು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿ, ಕೆರೂರಿನಲ್ಲಿ ಕೃಷಿಕಾರ್ಯದಲ್ಲಿ ತೊಡಗಿದರು. ಅಧಿಕ ಇಳುವರಿ ಪಡೆದರು. ಮುಂದೆ ವಿಜಾಪುರ ಹೈಸ್ಕೂಲೊಂದರಲ್ಲಿ ಶಿಕ್ಷಕ ನೌಕರಿಗೆ ಸೇರಿದರು. ನಂತರ ಎಂ.ಎ. ಪಡೆಯಲು ಮುಂಬಯಿಗೆ ಬಂದು ಉತ್ತಮ ದರ್ಜೆಯಲ್ಲಿ ತೇರ್ಗಡೆಯಾದರು. ದೈಹಿಕ ಶಿಕ್ಷಣ ನಿರ್ದೇಶಕರಾಗಿ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಉದ್ಯೋಗಕ್ಕೆ ಸೇರಿದರು. ಇಲ್ಲಿಯು ಕೆ.ಎಲ್.ಇ. ಸಂಸ್ಥೆಯುವರೊಂದಿಗೆ ಭಿನ್ನಾಭಿಪ್ರಾಯವುಂಟಾಗಿ ಕೆಲಸಕ್ಕೆ ರಾಜೀನಾಮೆ ನೀಡಿ ಕೆರೂರಿಗೆ ಬರಳಿದರು. ಪ್ರೊ. ಕೆ.ಜಿ. ಕುಂದಣಗಾರರ ಮಾರ್ಗದರ್ಶನದಲ್ಲಿ 'ಕನ್ನಡ

ಜಾಪದ ಗೀತೆಗಳು' ವಿಷಯ ಕುರಿತು ಸಂಶೋಧನಾಧ್ಯಯನ ಮಾಡಿ, ಪ್ರೌಢ ಪ್ರಬಂಧ ಬರೆದು ಧಾರವಾಡ ಕ.ವಿ.ವಿ.ಕ್ಕೆ ಸಾದರ ಪಡಿಸಿ, ಪಿಎಚ್.ಡಿ. ಪಡೆದರು(1964). ಮುಂದೆ ಲಕ್ಷ್ಮೇಶ್ವರದ ಉಮಾ ವಿದ್ಯಾಲಯ (ಶ್ರೀ ಉಮಾ ಮುನಸಿಪಲ್ ಹೈಸ್ಕೂಲು) ದ ಹೆಡ್ ಮಾಸ್ತರರಾಗಿ 1955ರಲ್ಲಿ ನೇಮಕಗೊಂಡರು. ಗದ್ದಗಿಮಠರು ಇಲ್ಲಿರುವಾಗ ಲಕ್ಷ್ಮೇಶ್ವರದ ಗುಡಿ–ಮಠ, ಬಸದಿ–ಮಸೀದಿಗಳನ್ನು ಅಭ್ಯಸಿಸಿದರು. ಜತೆಗೆ ಹೈಸ್ಕೂಲನ್ನು ಚೆನ್ನಾಗಿ ಬೆಳೆಸಿದರು. ಒಳ್ಳೆಯ ಹೆಸರೂ ಪಡೆದರು. ಆದರೆ ಕಿಡಿಗೇಡಿಗಳ ಮಾತ್ಸರ್ಯದಿಂದ ಬೇಸತ್ತು ಗದ್ದಗಿಮಠರು 1956 (28–5–1956) ರಲ್ಲಿ ಹೆಡ್‌ಮಾಸ್ತರರ ಹುದ್ದೆಗೆ ರಾಜೀನಾಮೆ ನೀಡಿ ಹೊರಬರುತ್ತಾರೆ. ಕನ್ನಡ ಎಂ.ಎ. ಓದಿ, ಜನಪದ ಸಾಹಿತ್ಯದಲ್ಲಿ ಪಿಎಚ್.ಡಿ ಪಡೆದ ಗದ್ದಗಿಮಠರಂಥ ವಿದ್ವಾಂಸರಿಗೆ 1960ರ ದಶಕದಲ್ಲಿ ಶಾಶ್ವತ ಉದ್ಯೋಗ ದೊರಕದೆ ಪರದಾಡುವ ಸ್ಥಿತಿ ಉಂಟಾಗಿತ್ತು. ಒಳ್ಳೆಯವರಿಗೆ, ಯೋಗ್ಯರಿಗೆ ವಿಘ್ನಗಳು ಇದ್ದೇ ಇರುತ್ತವೆ. ಅವರಿಗೆ ಅವುಗಳನ್ನು ಮೆಟ್ಟಿ ಬದುಕುವುದು ಅನಿವಾರ್ಯವಾಗುತ್ತದೆ. ಗದ್ದಗಿಮಠರಂತೂ ಎಂದೂ ರಾಜೀಮಾಡಿಕೊಳ್ಳುವ ಸ್ವಭಾವದವರಲ್ಲ. ಸತ್ಯನಿಷ್ಠುರರು, ಯಾರ ಭಿಡೆಮುರವತ್ತುಗಳಿಗೂ ಒಳಗಾಗುವವರಲ್ಲ! 1957ರಲ್ಲಿ ಕ.ವಿ.ವಿ. ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯಲ್ಲಿ ಅಸಿಸ್ಟಂಟ್ ಡಾಯರೆಕ್ಟರರಾಗಿ ಸೇವೆಗೆ ಸೇರಿದರು. (29–10–1957). ಇಲ್ಲಿ ಇವರು 3 ವರುಷಕ್ಕೆ 4 ದಿನ ಕಡಿಮೆ ಕೆಲಸಮಾಡಿದರು; 1960 ನವೆಂಬರ್ 2 ರಂದು ಲಿಂಗೈಕ್ಯರಾದರು.

ಕ.ವಿ.ವಿ. ಪ್ರಸಾರಾಂಗದಲ್ಲಿ 'ಸಂಚಾರಿ ವಾಚನಾಲಯ' ವಿತ್ತು (1958). ಸುಮಾರು ಇಪ್ಪತ್ತು ಹಳ್ಳಿಗಳಿಗೆ ಇದನ್ನು ಗದ್ದಗಿಮಠರೇ ಕೊಂಡೊಯ್ಯುತ್ತಿದ್ದರು. ತದನಂತರ ಪುಸ್ತಕ ಪ್ರಕಟನೆಯನ್ನು

ಆರಂಭಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ತಜ್ಞರಿಂದ ಉಪನ್ಯಾಸ ಏರ್ಪಡಿಸುತ್ತಿದ್ದರು. ಚೆನ್ನವೀರ ಕಣವಿ, ಗದ್ದಗಿಮಠ, ಎಸ್.ಬಿ. ನಾಯಕ– ಮೂವರೂ ಹೋಗುತ್ತಿದ್ದರು. ಪುಸ್ತಕ ಮರಾಟ ಕೂಡ ಮಾಡುತ್ತಿದ್ದರು. ಗದ್ದಗಿಮಠರು ವಿವಿಧ ವಿಷಯಗಳ ಮೇಲೆ ಅನೇಕ ಉಪನ್ಯಾಸ ಕೂಡ ನೀಡಿದ್ದಾರೆ. ಒಳ್ಳೇ ಭಾಷಣಕಾರರೂ ಜನಪದ ಗಾಯಕರೂ ಆಗಿದ್ದರು. ಹಂತಿಪದ, ದುಂದುಮೆ ಹಾಡುಗಳನ್ನು ಚೆನ್ನಾಗಿ ಹಾಡುತ್ತಿದ್ದರು. ಇವರ ಭಾಷಣದ ವೈಖರಿ ಮತ್ತು ಹಾಡುವ ಕಲೆಗಳಿಂದ ಗ್ರಾಮೀಣ ಜನ ತುಂಬ ಸಂತೋಷಪಟ್ಟುದುಟು. ವಿ.ವಿ.ದ ವಾಹನದಲ್ಲಿ ಸಂಚಾರಿ ವಾಚನಾಲಯ ತೆಗೆದುಕೊಂಡು ಉತ್ತರ ಕನ್ನಡ ಜಿಲ್ಲೆಯ ಅಂಕೋಲ ಮತ್ತು ಬನವಾಸಿಗಳಲ್ಲಿಯೂ ಸಂಚರಿಸಿದ್ದಾರೆ. ಇವರು ಬನವಾಸಿಯ ವರದಾನದಿಯಲ್ಲಿ ಈಜಾಡಿದ್ದು, ಸ್ನಾನ ಮಾಡಿದ್ದುದೆಲ್ಲವನ್ನೂ ಎಸ್.ಬಿ. ನಾಯಕರು ನೆನಪಿಸಿಕೊಂಡು ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ. ತಮ್ಮ ತೋಟದಲ್ಲಿಯ ಗಿಡ, ಹೂ, ಬಳ್ಳಿಗಳಿಗೆ ಗುದ್ದಲಿಯಿಂದ ಕೆಲಸ ಮಾಡುತ್ತಿರುವಾಗ ಹೃದಯಾಘಾತದಿಂದ ಗದ್ದಗಿಮಠರು ನಿಧನರಾದರು. ವಿ.ವಿ. ಆವರಣದಲ್ಲಿ ಆಜಾನುಬಾಹುಗಳುಳ್ಳ ದೊಡ್ಡ ವ್ಯಕ್ತಿತ್ವದವರು ಗದ್ದಗಿಮಠರೊಬ್ಬರೇ ಇದ್ದರು. ಕನ್ನಡ, ಇಂಗ್ಲಿಷ್ ಭಾಷೆಗಳನ್ನು ಅರಳು ಹುರಿದಂತೆ ಮಾತನಾಡುತ್ತಿದ್ದರು. ಸಂಸ್ಕೃತ ಪ್ರಾಕೃತ ಭಾಷೆಗಳನ್ನೂ ಅರಿತಿದ್ದರು.

**೨. ಅನುಪಲಬ್ಧ ಸಾಹಿತ್ಯ :** ಡಾ. ಬಿ.ಎಸ್. ಗದ್ದಗಿಮಠ ಅವರು ಉದ್ಯೋಗ ಅರಸುವ ಸಂದರ್ಭದಲ್ಲಿ, ದೊರೆತ ಉದ್ಯೋಗದಲ್ಲಿ ನಿರತರಾದ ಸಂದರ್ಭದಲ್ಲಿ, ಕ್ಷೇತ್ರಕಾರ್ಯದ ಮೂಲಕ ಕೆಲವಾರು ಪ್ರಬಂಧಗಳನ್ನು ಸಂಶೋಧನ ಲೇಖನಗಳನ್ನು ಹಾಗೂ ಸೃಜನಶೀಲ ಸಾಹಿತ್ಯವನ್ನು ನಿರ್ಮಿಸಿದುದು ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ

ಬಗೆಗೆ ಸಂಶೋಧನೆ ಕೈಕೊಂಡಿದ್ದರು. ಪುಲಗೆರೆ (ಈಗಿನ ಲಕ್ಷ್ಮೇಶ್ವರ) ಕುರಿತೂ ಸಂಶೋಧನೆ ನಡೆಸಿ 'ಅಳಿದುಳಿದ ಪುಲಿಗೆರೆ' ಪ್ರಬಂಧ ಬರೆದಿದ್ದಾರೆ. 1955ರ ಸುಮಾರಿನಲ್ಲಿ ಗದ್ದಗಿಮಠ ಅವರು ಸ್ವತಃ ಕವಿಗಳೂ ಆಗಿದ್ದರು. ಜನಪದ ಭಾಷೆ ಮತ್ತು ಲಯಗಳಲ್ಲಿಯೇ ಬರೆದ ಅವರ ಭಾವಗೀತೆಗಳ ಹಸ್ತಪ್ರತಿ ಉಪಲಬ್ಧವಾಗಿದೆ. (ಪ್ರಕಟವಾಗಿಲ್ಲ). ಒಟ್ಟು 62 ಕವಿತೆಗಳುಳ್ಳ ಸಂಗ್ರಹವಿದು. ಅವರು ಕೆಲವು ಶಾಸನಗಳನ್ನು ಕಲೆಹಾಕಿರುವುದೂ ತಿಳಿದುಬರುತ್ತದೆ. ಬಳ್ಳಾರಿಯಿಂದ ಹೊರಡುವ 'ನವಸಂದೇಶ'ದ ದಿನಾಂಕ 18–10–59ರ ಸಂಚಿಕೆಯಲ್ಲಿ 'ವೀರಶೈವ ಶಾಸನಗಳು' ಎಂಬ ಗ್ರಂಥವನ್ನು ಡಾ. ಗದ್ದಗಿಮಠ ಅವರು ಸಿದ್ಧಪಡಿಸಿದ ಉಲ್ಲೇಖವಿದೆ. ಈ ಗ್ರಂಥ ಅನುಪಲಬ್ಧ (ಗುರುಲಿಂಗ ಕಾಪಸೆ). ಉತ್ತರ ಕರ್ನಾಟಕದ ಘಟಪ್ರಭಾ, ಹಿರಣ್ಯಕೇಶಿ, ತಾಮ್ರಪರ್ಣಿ, ಮಾರ್ಕಂಡೇಯ, ಮಲಪ್ರಭಾ ನದಿಗಳ ಕುರಿತು ಪುರಾಣಕತೆಗಳನ್ನು ಮತ್ತು ಐತಿಹ್ಯಗಳನ್ನು ಬಲ್ಲವರಾಗಿದ್ದರು. ಇವುಗಳನ್ನು ಕುರಿತು ಐತಿಹ್ಯಗಳನ್ನು ಸಂಕಲಿಸಿರುವ ಸಾಧ್ಯತೆಯೂ ಇದೆ. ಗದ್ದಗಿಮಠರ ಬರಹಗಳು ಹಾಗೂ ಅವರ 'ಕನ್ನಡ ಜಾನಪದ ಗೀತೆಗಳು' ಗ್ರಂಥಗಳನ್ನು ಅವಲೋಕಿಸಿದಾಗ ಹೀಗನ್ನಿಸುತ್ತದೆ: ಇವರು ಐತಿಹಾಸಿಕ ಪುರುಷರು ಮತ್ತು ಶರಣರನ್ನು ಕುರಿತು ಚಿಂತನೆಮಾಡುತ್ತಿದ್ದರು. ಅಷ್ಟೇ ಏಕೆ! ಇವರನ್ನು ಕುರಿತು ಪರಿಶೋಧನೆ ಕೂಡ ಮಾಡಿದ್ದಾರೆ. ಇಂಗ್ಲೀಷ್‌ನಲ್ಲಿಯೂ ಕೆಲವಾರು ಲೇಖನಗಳನ್ನು ಬರೆದಿದ್ದಾರೆ. Journal of the Humanities ನಲ್ಲಿ ಮತ್ತು ಡಿ.ಸಿ. ಪಾವಟೆ ಅಭಿನಂದನ ಗ್ರಂಥದಲ್ಲಿ ಮೌಲಿಕ ಲೇಖನಗಳನ್ನು ಬರೆದಿದ್ದಾರೆ. ಅನೇಕ ತಾಡೋಲೆ, ಹಸ್ತಪ್ರತಿಗಳನ್ನು ಸಂಗ್ರಹಿಸಿದ್ದರು.

ಗದ್ದಗಿಮಠ ಅವರು ಪ್ರಕಟಣೆಗೆ ಸಿದ್ಧಪಡಿಸಿದ ಹಲವು ಕೃತಿಗಳನ್ನು ಶ್ರೀ ಕೊತ್ತಲ ಮಹಾದೇವಪ್ಪನವರು ಗುರುತಿಸಿದ್ದಾರೆ. ಅವು ಇಂತಿವೆ:

೧) ಜಾನಪದ ಸಂಬಾರ-೧, ೨) ಜಾನಪದ ಸಂಬಾರ-೨, ೩) ಶಿವಶರಣರ ಹಂತಿಯ ಹಾಡುಗಳು, ೪) ಜಾನಪದ ಮಹಾಭಾರತ, ೫) ಜಾನಪದ ಭಾವಗೀತೆಗಳು ೬) ಕಲ್ಯಾಣ ಬಸವನ ಹಾಡು, ೭) ಜಾನಪದ ಶಬ್ದಕೋಶ ೮) ಜಾನಪದ ರಾಮಾಯಣ ೯)ಕಾಯಕ ಗೀತೆಗಳು, ಇತ್ಯಾದಿ.

1959 ರಲ್ಲಿ ಸಾಹಿತ್ಯ ಸಂಸ್ಕೃತಿ ಇಲಾಖೆಗೆ ಡಾ. ಗದ್ದಗಿಮಠರು ಏಳು ಹಸ್ತಪ್ರತಿಗಳನ್ನು ಒಪ್ಪಿಸಿದ್ದು, ಆಗಿನ ನಿರ್ದೇಶಕರು, ಅವು ತಮಗೆ ತಲುಪಿದ ಬಗೆಗೆ ಕಾಗದ ನಂ.2118/59-60 L & CD ದಿನಾಂಕ 28-7-1959 ರ ಮೇರೆಗೆ ಈ ಕೆಳಗಿನ ಕೃತಿಗಳು ಇವೆ ಎಂದು ಡಾ. ಜಿ.ಎಸ್. ಕಾಪಸೆ ಗುರುತಿಸಿ ತಿಳಿಸಿದ್ದಾರೆ. ೧) ಬಸವಪುರಾಣ ಕಥಾ ಸಾಗರ ೨) ನೂರೊಂದು ಶರಣರ ಹಂತಿಯ ಹಾಡುಗಳು ೩)ಕನ್ನಡ ಕೋಲುಪದಗಳು ೪) ಕನ್ನಡ ಸೋಬಾನಗಳು ೫) ಜಾನಪದ ಮಹಾಭಾರತ ೬) ಕನ್ನಡ ಜಾನಪದ ಗೀತೆಗಳು (ಮಹಾಪ್ರಬಂಧ) ೭) ಕನ್ನಡ ಜಾನಪದ ದರ್ಶನ (ಮಹಾಪ್ರಬಂಧ) ಇತ್ಯಾದಿ. ಇವುಗಳಲ್ಲಿ 'ಕನ್ನಡ ಜಾನಪದ ಗೀತೆಗಳು' (ಮಹಾಪ್ರಬಂಧ) ಕ.ವಿ.ವಿ. ಸಂಕ್ಷೇಪಿಸಿ 1963ರಲ್ಲಿ ಪ್ರಕಟಿಸಿದೆ. 'ಕನ್ನಡ ಜಾನಪದ ದರ್ಶನ' (400 ಪುಟಗಳ ಮಹಾಪ್ರಬಂಧ) ಪ್ರಕಟವಾಗಿಲ್ಲ. ಡಾ. ಜೀಶಂಪ ಅವರು ಪ್ರಧಾನ ಸಂಪಾದಕರಾಗಿ ಪ್ರಕಟಿಸಿದ 'ಗದ್ದಗಿಮಠರ ಬರಹಗಳು' ಕೃತಿಯಲ್ಲಿ ಅಲ್ಲಿಯ ಲೇಖನಗಳು ಸಮಾವೇಶಗೊಂಡಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಆದರೂ ಈ ಸಂಕಲನಗಳು ಎಲ್ಲಿವೆ, ಏನಾಗಿವೆ ಎಂಬುದರ ತನಿಖೆ-ಸಂಶೋಧನೆ ನಡೆಯಬೇಕಿದೆ. 'ಬಸವಪುರಾಣ ಕಥಾಸಾಗರ' - ಗದ್ಯ ಸಂಗ್ರಹವೊಂದನ್ನುಳಿದು, ಉಳಿದವುಗಳೆಲ್ಲ ಹಾಡುಗಳ ಸಂಗ್ರಹವೇ! ಜಾನಪದ ಮಹಾಭಾರತ, ಜಾನಪದ

ರಾಮಾಯಣ, ಜಾನಪದ ಶಬ್ದಕೋಶ – ಈ ಅಪ್ರಕಟಿತ ಮೌಲಿಕ ಗ್ರಂಥಗಳು ಗದ್ದಗಿಮಠರ ವಿಶೇಷ ಪರಿಶ್ರಮದ ಫಲಗಳು. ಇವು ಗದ್ದಗಿಮಠರು ಸಿದ್ಧಪಡಿಸಿದ ಮೊಟ್ಟಮೊದಲ ಗ್ರಂಥಗಳು. ಇವರು ಬರುವವರೆಗೆ ಈ ಬಗೆಗೆ ಯಾರೂ ಯೋಚಿಸಿರಲಿಲ್ಲ. 1960–70ರ ಸಂದರ್ಭದಲ್ಲಿ ನಮ್ಮಲ್ಲಿ ವಿಮರ್ಶೆ–ಸಂಪಾದನ ಶಾಸ್ತ್ರ–ಶೈಕ್ಷಣಿಕ ಶಿಸ್ತುಗಳು ಬೆಳೆದಿವೆ. ಆದರೆ 1950ರ ದಶಕದಲ್ಲಿಯೇ ಡಾ. ಗದ್ದಗಿಮಠರು ತಮಗೆ ತೋಚಿದಂತೆ ವ್ಯಾಪಕ ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಈ ಮೇಲಿನ ಹಲವು ಗ್ರಂಥಗಳನ್ನು ಸಿದ್ಧಪಡಿಸಿದ ಮೊದಲಿಗರೆನಿಸಿದ್ದಾರೆ. ಆದರೆ ಅವಿಂದು ಉಪಲಬ್ಧವಿಲ್ಲದುದು ದುರಾದೃಷ್ಟ.

೩. **ಜಾನಪದ ಜಂಗಮ :** ಪ್ರೊ. ಕೆ.ಜಿ. ಕುಂದಣಗಾರರಂಥ ಸಂಶೋಧಕ–ವಿದ್ವಾಂಸರ ಗರಡಿಯಲ್ಲಿ ರೂಪುಗೊಂಡು, 'ಜನಪದ ಸಾಹಿತ್ಯ ರತ್ನ', 'ಜನಪದ ಜ್ಯೋತಿ', 'ಜಾನಪದ ಜಂಗಮ' – ಎಂಬ ಅಭಿಮಾನಿಗಳ ಆದರದ ಅಭಿದಾನಕ್ಕೆ ಪಾತ್ರರಾದ ಡಾ. ಬಿ.ಎಸ್. ಗದ್ದಗಿಮಠ ಅವರು ಕನ್ನಡ ಜನಪದ ಸಂಪದದ ಸಮೃದ್ಧಿಯ ಐಸಿರಿಯನ್ನು ಹೆಚ್ಚಿಸಿದವರು. ಯಾವುದೇ ಸಂಘ–ಸಂಸ್ಥೆಯ, ವಿಶ್ವವಿದ್ಯಾನಿಲಯದ ಲವಲೇಶವೂ ಸಹಾಯ–ಸಹಕಾರವಿಲ್ಲದೆ ಕೇವಲ ಜಾನಪದದ ಮೇಲಿನ ಪ್ರೀತಿ ಅಭಿಮಾನದಿಂದ ವ್ಯಾಪಕ ಕ್ಷೇತ್ರ ಕಾರ್ಯಕೊಂಡು, ಜನಪದ ಸಾಹಿತ್ಯಾಧ್ಯಯನ ಮತ್ತು ಪ್ರಕಟನ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಸ್ವಯಂಪ್ರೇರಿತ ಜನಪದ ಪ್ರೇಮಿಯಾದ ಇವರು ಇಂದಿನ ಅಧ್ಯಯನಕಾರರಂತೆ ಯಾವುದೇ ಅನುದಾನಕ್ಕೆ ಆಶಿಸದೆ ಜನಪದ ಸಾಹಿತ್ಯವನ್ನು ಸಂಕಲಿಸಿ ಪ್ರಕಟಿಸಿದ್ದು ಸಾಮಾನ್ಯ ಸಾಧನೆಯಲ್ಲ. ಮಡದಿ ಮಕ್ಕಳನ್ನು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಕಟಕೋಳದಲ್ಲಿ (ಮಡದಿಯ ತವರು) ಬಿಟ್ಟು, ಹಳ್ಳಿ ಹಳ್ಳಿ ತಿರುಗುತ್ತ, ಕೈಗೆ ಸಿಕ್ಕ

ಹಾಡುಗಳನ್ನು ಕಲೆಹಾಕುತ್ತ, ಗೊತ್ತಿರುವ ಜನಪದ ಹಾಡುಗಳನ್ನು ಹಾಡುತ್ತ, ಜನಪದ ಸಾಹಿತ್ಯ ಕುರಿತು ಮಾತನಾಡುತ್ತ, ಜನಪದ ಗೀಳಿನ 'ಜಾನಪದ ಜಂಗಮ' ನಾಗಿ ತನ್ನ ವ್ಯಕ್ತಿ ವೈಶಿಷ್ಟ್ಯ-ಸಾಧನೆ-ಸಿದ್ಧಿಯನ್ನು ಮೆರೆದ ಅಪೂರ್ವ ಜನಪದ ವಿದ್ವಾಂಸ ಡಾ. ಗದ್ದಗಿಮಠರು.

ಜನಪದ ಹಾಡು, ವಸ್ತು, ಕಥೆ, ಐತಿಹ್ಯ... ಕುರಿತು ಸದಾ ಚಿಂತನೆಮಾಡುತ್ತಿದ್ದ ಗದ್ದಗಿಮಠ ಅವರು ಕರ್ನಾಟಕ ಹಬ್ಬ ಹರಿದಿನ, ವ್ರತಾಚರಣೆಗಳು, ಅವುಗಳ ವೈಶಿಷ್ಟ್ಯ, ಅವುಗಳಿಗಿರುವ ಜನಪದೀಯ ಅರ್ಥಪರಂಪರೆ, ಸಂಸ್ಕೃತಿ ಹಿನ್ನೆಲೆ ಸರಿಯಾಗಿ ತಿಳಿದಿದ್ದರು; ಜನಪದ ಸಂಪ್ರದಾಯಗಳನ್ನು ಅರಿತಿದ್ದರು. ಅವುಗಳ ಪುನರುಜ್ಜೀವನಕ್ಕಾಗಿ ಅವನ್ನು ಕುರಿತು ಸಾಕಷ್ಟು ಮಾತನಾಡಿದ್ದಾರೆ; ಬರೆದಿದ್ದಾರೆ; ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ; ಸಭೆ ಸಮಾರಂಭಗಳಲ್ಲಿ ಪ್ರಚಾರ ಕೂಡ ಮಾಡಿದ್ದಾರೆ. ಜನಪದ ಸಾಹಿತ್ಯದಿಂದ ತಾವು ಪಡೆದ ಜ್ಞಾನಾನುಭವವನ್ನು ಈ ಮೂಲಕ ಇತರರಿಗೆ ವಿತರಿಸಲು ಪರಿಶ್ರಮಿಸಿದ್ದಾರೆ. ಅವರ ಶ್ರೀಮತಿ ಅನಸೂಯಾ ದೇವಿಯವರೂ ಉತ್ತಮ ಜನಪದ ಹಾಡುಗಾರ್ತಿಯಾದುದರಿಂದ ಅವರನ್ನೂ ಎತ್ತಿನ ಬಂಡಿಯಲ್ಲಿ ತಮ್ಮ ಜತೆ ಗ್ರಾಮೀಣ ಪ್ರದೇಶಗಳಿಗೆ ಕರೆದೊಯ್ದು ಜನಪದ ಗೀತೆಗಳನ್ನು ಹಾಡಿಸಿ, ವ್ಯಾಖ್ಯಾನಿಸಿ, ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳ ಪ್ರಸಾರ ಕಾರ್ಯಗೈದಿದ್ದಾರೆ. ಗದ್ದಗಿಮಠ ಅವರು ತಮ್ಮನ್ನು ತಾವು ಅತ್ಯಂತ ಉತ್ಸಾಹದಿಂದಲೇ ಜಾನಪದ ಕ್ಷೇತ್ರಕ್ಕೆ ಸಮರ್ಪಿಸಿಕೊಂಡಿದ್ದರು. ತಾವು ಬದುಕಿದಷ್ಟು ಕಾಲವನ್ನು ಜನಪದ ಸಾಹಿತ್ಯ ಸಂಗ್ರಹ-ಸಂಕಲನ, ಅಧ್ಯಯನ, ಪ್ರಚಾರ-ಪ್ರಸಾರಗಳಿಗೇ ಕಳೆದರು. ಗದ್ದಗಿಮಠರು ಏಕವ್ಯಕ್ತಿಯಾಗಿ ಜನಪದ ಸಾಹಿತ್ಯ ಸಂಗ್ರಹಿಸಿ, ಜಾನಪದ ಕಣಜ ತುಂಬಿದುದು ಗಮನಾರ್ಹ. ಜನಪದ ಸಾಹಿತ್ಯಾಧ್ಯಯನದ ಪ್ರಥಮ

ಘಟ್ಟ ಮೂವತ್ತರ ದಶಕದ ಹಲಸಂಗಿ ಗೆಳೆಯರಾದರೆ, ದ್ವತೀಯ ಘಟ್ಟ ಐವತ್ತರ ದಶಕದ ಡಾ.ಬಿ.ಎಸ್. ಗದ್ದಗಿಮಠರದು. ಜನಪದ ಸಾಹಿತ್ಯದ ಬಗೆಗೆ ಅಷ್ಟಾಗಿ ಅರಿವಿರದ, ಅರಿವಿದ್ದವರು ಅದರ ಬಗೆಗೆ ಮೂಗುಮುರಿಯುವ ಸಂದರ್ಭದಲ್ಲಿ ಗದ್ದಗಿಮಠರು ಜನಪದ ಸಾಹಿತ್ಯ ಸಂಗ್ರಹ-ಅಧ್ಯಯನವನ್ನು ತಮ್ಮ ಜೀವನದ ಪ್ರಮುಖ ಧ್ಯೇಯವಾಗಿರಿಸಿಕೊಂಡು ಅದರ ಬೆನ್ನುಹತ್ತಿದ್ದು ಅಶ್ಚರ್ಯದ ಸಂಗತಿಯೇ! ಹಲವರ ಟೀಕೆಗೆ, ತಮಾಷೆಗೆ ಕಾರಣರಾದುದುಂಟು. ಇದಾವುದನ್ನೂ ಲೆಕ್ಕಿಸದೆ, ತನ್ನ ಮೇಲೆ ತನಗಿರುವ ವಿಶ್ವಾಸ, ತಾನು ಕೈಗೊಂಡ ಜನಪದ ಕಾರ್ಯದ ಮೇಲಿನ ನಂಬಿಕೆಗಳಿಂದ ಮುಂದುವರಿದು, ಯಾರಿಗೂ ಕಾಣದ, ಯಾರೂ ಯೋಚಿಸದ ಅದ್ಭುತ 'ಜನಪದ ಗಣಿ' ಯನ್ನು ಕನ್ನಡಿಗರಿಗೆ ತೋರಿದ ಸಾಹಸಿಗರೆನಿಸಿದರು. ಪಂಡಿತರ, ವಿದ್ವಾಂಸರ ಅವಜ್ಞತೆಗೆ ಒಳಗಾಗಿದ್ದ ಜನಪದ ಸಾಹಿತ್ಯದಲ್ಲಿಯ 'ರತ್ನರಾಶಿ' ಯನ್ನು ಕಲೆಹಾಕಿ ತೋರಿ, ಅವರು ಬೆರಳಕಚ್ಚುವಂತೆ ಮಾಡಿದ್ದು ಸಾಮಾನ್ಯ ಕೆಲಸವಲ್ಲ. ಇವರ ಜನಪದ ಕಾರ್ಯದಿಂದ ಪ್ರೇರಿತರಾಗಿ ಕರ್ನಾಟಕದಲ್ಲಿ ಹಲವಾರು ಕನ್ನಡ ಅಧ್ಯಾಪಕರು, ವಿದ್ವಾಂಸರು ಜಾನಪದ ಸಂಗ್ರಹ ಅಧ್ಯಯನಕ್ಕೆ ಮುಗಿಬಿದ್ದರು.

೪. **ಪರಿಸರ-ಪ್ರಭಾವ-ಪ್ರೇರಣೆ** : ಬಿ.ಎಸ್. ಗದ್ದಗಿಮಠ ಅವರ ಹುಟ್ಟು ಜಾನಪದ ಪರಿಸರವಾದ್ದರಿಂದ, ಜಾನಪದ ಕ್ಷೇತ್ರದ ಬಗೆಗೆ ಅವರಿಗೆ ಸಹಜವಾದ ಪ್ರೀತಿ, ಕಾಳಜಿ, ಅಭಿಮಾನ ಒಡಮೂಡಿತು. ಬಾಗಲಕೋಟೆ ಜಿಲ್ಲೆಯವರಾದ ಡಾ. ಗದ್ದಗಿಮಠ ಅವರು ಹಲಸಂಗಿ ಗೆಳೆಯರ ಕಾರ್ಯದಿಂದ ಪ್ರೇರಣೆ ಪಡೆದು, ಸ್ಫೂರ್ತರಾಗಿ, ಹಳ್ಳಿ ಹಳ್ಳಿ ಸುತ್ತಿಸುಳಿದು ಜನಪದ ಹಾಡುಗಳನ್ನು ಸಂಗ್ರಹಿಸತೊಡಗಿದರು. ಧಾರವಾಡದಿಂದ ಪ್ರಕಟವಾಗುತ್ತಿದ್ದ 'ಜಯಕರ್ನಾಟಕ' ಪತ್ರಿಕೆಯಲ್ಲಿ

ಜನಪದ ಸಾಹಿತ್ಯಕ್ಕೆ ವಿಶೇಷ ಅಂಕಣ ಮೀಸಲಿಡಲಾಗಿತ್ತು. ಹಲಸಂಗಿ ಗೆಳೆಯರ ತ್ರಿಪದಿ, ಲಾವಣಿ ಹಾಡುಗಳು ಮೊದಲು ಬೆಳಕಿಗೆ ಬಂದುದು ಈ ಪತ್ರಿಕೆಯಲ್ಲಿಯೇ. ಬೆಟಗೇರಿ ಕೃಷ್ಣಶರ್ಮ ಅವರ ಸಂಪಾದಕತ್ವದ 'ಜಯಂತಿ' ಪತ್ರಿಕೆಯಲ್ಲಿ ಜಾನಪದವನ್ನು ಕುರಿತು ಹಲವಾರು ಮಿಮರ್ಶಾತ್ಮಕ ಲೇಖನಗಳು ಆಗಲೇ ಬೆಳಕುಕಂಡಿದ್ದವು. ಬೆಟಗೇರಿ ಅವರು 'ಕೆರೆಗೆ ಹಾರ' (1922), 'ಬೀಸು ಕಲ್ಲಿನ ಹಾಡುಗಳು' (1928) ಸಂಕಲಿಸಿದ್ದರು; ಜನಪದದ ಕೆಲವಾರು ಲೇಖನಗಳನ್ನು ಬರೆದಿದ್ದರು. ಪ್ರಸ್ತುತ ಪತ್ರಿಕೆಗಳಿಂದ ಜನಪದ ಸಾಹಿತ್ಯದೆಡೆಗೆ ಒಲವನ್ನು ಗದ್ದಗಿಮಠ ಅವರು ಬೆಳೆಯಿಸಿಕೊಂಡಿರುವ ಸಾಧ್ಯತೆಯಿದೆ. ಅಲ್ಲದೆ, ಮಾಸ್ತಿ, ಮಧುರಚೆನ್ನ, ಬೇಂದ್ರೆ, ಬೆಟಗೇರಿ, ಬಿ.ಎಂ.ಶ್ರೀ. ಶಿ.ಶಿ. ಬಸವನಾಳ, ಕೆ.ಜಿ. ಕುಂದಣಗಾರ ಮುಂತಾದವರ ಪ್ರೇರಣೆ ಪ್ರೋತ್ಸಾಹದಿಂದಲೂ ಗದ್ದಗಿಮಠ ಅವರು ಜನಪದದ ಬಗೆಗೆ ವಿಶೇಷ ಆಸಕ್ತಿ ತಳೆದು ಬಹಳಷ್ಟು ಕೆಲಸ ಮಾಡಲು ಕಾರಣವಾದಂತಿದೆ. ಅವರೇ ಹೇಳುವಂತೆ – "ಜನಪದ ಸಾಹಿತ್ಯದಲ್ಲಿ ನನಗೆ ಅಭಿರುಚಿ ಹುಟ್ಟಲು ನನ್ನ ತಂದೆ ತಾಯಿಗಳೇ ಮುಖ್ಯ ಕಾರಣ. ತಂದೆಯವರು ನೂರೊಂದು ಶರಣರ ಕಥನರೂಪದ ಹಂತಿಯ ಹಾಡುಗಳನ್ನು ಸುಗ್ಗಿಯ ಕಾಲದಲ್ಲಿ ಬೆಳೆತನಕ ಹಾಡುವುದನ್ನು ಕೇಳಿ ಪ್ರಭಾವಿತನಾದೆ" (ಈಶ್ವರಚಂದ್ರ ಚಿಂತಾಮಣಿ) ಎಂದುದು ನಿಜ. ತಂದೆ ಸಾವಳಿಗೆಯ್ಯನ, ತಾಯಿ ಸಾವಂತ್ರೆವ್ವ (ಚಿಕ್ಕಮ್ಮ) ಜಾನಪದ ಹಾಡುಗಾರ್ತಿ, ಕವಯಿತ್ರಿ, ಇಂಥವರ ಮಡಿಲಲ್ಲಿಯೇ ಬೆಳೆದವನು ಸಾವಳಿಗೆಪ್ಪ. ಸ್ವತಃ ಹಾಡುಗಳ ಕಣಜ. ಹೀಗೆ ಜನಪದ ಸಾಹಿತ್ಯ ಪರಂಪರೆಯಲ್ಲಿಯೇ ಹುಟ್ಟಿ ಬೆಳೆದವರು ಗದ್ದಗಿಮಠ ಅವರು. "ಗುರುವರ್ಯ ಪ್ರೊ. ಕೆ.ಜಿ. ಕುಂದಣಗಾರರು ನಮ್ಮ ಜನಪದ ಸಂಗ್ರಹಕಾರ್ಯಕ್ಕೆ ನೆರವಿಗೆ ಬಂದರು; ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದರು" ಎಂದು ಗದ್ದಗಿಮಠರು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

**೫. ಜನಪದ ಕ್ಷೇತ್ರಕಾರ್ಯ :** ಡಾ. ಬಿ.ಎಸ್. ಗದ್ದಗಿಮಠ ಅವರು ಉತ್ತರ ಕರ್ನಾಟಕದಲ್ಲಿ ಅತ್ಯಂತ ವೇಗವಾಗಿ ಮತ್ತು ಚುರುಕಾಗಿ ಕ್ಷೇತ್ರಕಾರ್ಯ ಕೈಗೊಂಡರು. ಮುಂದೆ ಸುಮಾರು ಹತ್ತು ವರುಷಗಳವರೆಗೆ ನಿರಂತರ ಜನಪದ ಸಂಗ್ರಹ, ಸಂಪಾದನೆ, ಅಧ್ಯಯನ, ಪ್ರಕಟನಾ ಕಾರ್ಯಮಾಡಿದರು. ತಾವು 1943 ರಿಂದಲೇ ಜನಪದ ಸಾಹಿತ್ಯ ಸಂಗ್ರಹವನ್ನು ಆರಂಭಿಸಿದುದಾಗಿಯೂ ಉತ್ತರ ಕರ್ನಾಟಕದಲ್ಲಿ ಮಲೆನಾಡು–ಬಯಲು ಸೀಮೆ ಎಂದು ಭೇದ ಮಾಡಿಕೊಂಡು ಕೆಲಸ ಮಾಡಿದುದಾಗಿಯೂ ಗದ್ದಗಿಮಠರು ತಮ್ಮ 'ಜನತಾ ಗೀತೆಗಳು' ಸಂಕಲನದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಮಲೆನಾಡಿನ ವ್ಯಾಪ್ತಿ ಕಾರವಾರದ ಗಡಿಯವರೆಗಿದ್ದರೆ, ಬಯಲು ನಾಡಿನ ವ್ಯಾಪ್ತಿ ಕಲ್ಯಾಣ ಕಲಬುರ್ಗಿಯವರೆಗೆ ಎಂದು ಹೇಳಿ, ಅಲ್ಲೆಲ್ಲ ತಿರುಗಾಡಿ ಕಣ್ಣಿಗೆ ಬಿದ್ದ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು. ಅವರ ಮಾತುಗಳಲ್ಲಿಯೇ ಹೇಳುವುದಾದರೆ: "ಉತ್ತರ ಕರ್ನಾಟಕವನ್ನು ಮಲೆನಾಡು ಹಾಗೂ ಬಲಯನಾಡು ಎಂದು ಭಾಗಮಾಡಿಕೊಂಡು ಸಂಕಲನವನ್ನು ಮೊದಲು ಮಾಡಿದೆ. ನನ್ನ ಮಲೆನಾಡು ಕಾರವಾರ ಗಡಿಯವರೆಗೆ ಹರಿದಿದೆ. ಹಲ ಕೆಲವು ಅನಾನುಕೂಲತೆಯ ಮೂಲಕ ನನ್ನ ಸಂಕಲನವು ಮಲೆನಾಡ ಬೆಟ್ಟದ ಕೆಳಗೆ ಇಳಿಯಲಿಲ್ಲ. ಬಯಲುನಾಡು ನಿಜಾಮ ರಾಜ್ಯದ ಕಲ್ಯಾಣ ಕಲಬುರ್ಗಿಯವರೆಗೂ ಸಾಗಿ ಹೋಗಿದೆ. ಈ ಎರಡೂ ಭಾಗಗಳಲ್ಲಿ ಜನಜೀವನವು ಬೇರೆ ಬೇರೆಯಾಗಿ ಒಡೆದು ಕಾಣಲು ಮಲೆನಾಡನ್ನು ಬೆಟ್ಟದ ಕೆಳಗೆ, ಬೆಟ್ಟದ ಮೇಲೆ ಹಾಗು ಗಡಿನಾಡು ಎಂದು; ಬಯಲುನಾಡನ್ನು ದೋಣಿಸಾಲು, ಹೊಳೆಸಾಲು, ಬೆಳುವಲದ ಮಸಾರೆಯ ಸಾಲು ಹಾಗೂ ಎರೆಸಾಲು ಎಂದೂ ಭಾಗಮಾಡಿಕೊಂಡು ನನ್ನನೆದುರಿಗೆ ಬಿದ್ದ ಎಲ್ಲ ಹಾಡುಗಳನ್ನು ಸಂಕಲಿಸುತ್ತ ಬಂದೆ"

(ಜನತಾಗೀತೆಗಳು ಪು:13). ಹೀಗೆ, ಗದ್ದಗಿಮಠರು ಉತ್ತರ ಕರ್ನಾಟಕದ ಬೆಳಗಾವಿ, ಬಾಗಲಕೋಟೆ, ವಿಜಾಪುರ, ಧಾರವಾಡ... ಇತ್ಯಾದಿ ಜಿಲ್ಲೆಗಳನ್ನು ತಮ್ಮ ಜನಪದ ಕಾರ್ಯಕ್ಷೇತ್ರವಾಗಿರಿಸಿಕೊಂಡು ಅಧ್ಯಯನ ಮಾಡಿದ್ದಾರೆ. ಈ ಪ್ರದೇಶಗಳಲ್ಲಿ ಲಭ್ಯವಿರುವ, ಕೈಗೆ ದೊರೆತ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಇಲ್ಲಿ ವ್ಯಾಪಕವಾದ, ವ್ಯವಸ್ಥಿತವಾದ ಮತ್ತು ಸಾರ್ಥಕವಾದ ಕ್ಷೇತ್ರಕಾರ್ಯ ಮಾಡಿದ್ದಾರೆ. ತಂದೆಯ ಜನಪದ ಹಾಡುಗಾರಿಕೆಗೆ ಆಕರ್ಷಿತರಾಗಿ, ಮನಸೋತ ಗದ್ದಗಿಮಠರು ದನಿಯೆತ್ತರಿಸಿ ಹಾಡುವುದನ್ನು ತಂದೆಯಿಂದಲೇ ಕಲಿತು, ರೂಢಿಸಿಕೊಂಡು ಜನಪದ ಗುಂಗಿನಲ್ಲಿಯೇ ಊರೂರು ಸುತ್ತತೊಡಗಿದರು. ಮರೇಗುದ್ದಿ (ಜಮಖಂಡಿ), ಗಲಗಲಿ, ನಾಗರಾಳ, ಹಲಗಲಿ, ಬಾಗಲಕೋಟೆ, ಸಂಗಮ, ತಾಳಿಕೋಟ, ಮಮದಾಪುರ, ಬಬಲಾದಿಗಳಲ್ಲಿ ವಿಶೇಷವಾಗಿ ಜನಪದ ಹಾಡುಗಳನ್ನು ಸಂಕಲಿಸಿದರು.

ಕೆರೂರ, ನರಗುಂದ, ನವಲಗುಂದ, ಶಲವಾಡಿ, ಜಾಲೀಹಾಳ, ನರೇಗಲ್, ಮುಳಗುಂದ, ತೋರಗಲ್, ಕಡಕೋಳ, ವರಲಗೋಡ, ಬೈಲಹೊಂಗಲ, ಕಿತ್ತೂರು, ಗೋಕಾಕ, ಮಡಗಾವಿ, ಧಾರವಾಡ, ಹುಬ್ಬಳ್ಳಿ ಮುಂತಾದೆಡೆ ಸಂಚರಿಸಿ ಜನಪದ ಕ್ಷೇತ್ರಕಾರ್ಯ ಮಾಡಿದ್ದಾರೆ. ಹಳ್ಳಿಯವರೊಂದಿಗೆ ಹಳ್ಳಿಯವರಾಗಿ, ಹಳ್ಳಿಯ ಗಂಡು-ಹೆಣ್ಣುಗಳೊಂದಿಗೆ ಆತ್ಮೀಯವಾಗಿ ಬೆರೆತು, ಅವರೊಂದಿಗೆ ನಕ್ಕುನಲಿದು ತಾವೂ ಹಾಡಿ, ಅವರ ವಿಶ್ವಾಶವನ್ನು ಗೆದ್ದು, ಅವರಿಂದ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಹಳ್ಳಿಯ ಹೆಂಗಸರು ಬೆಳಿಗ್ಗೆ ಬೀಸುತ್ತ, ಕುಟ್ಟುತ್ತ ಸ್ವಯಂ ಸ್ಫೂರ್ತಿಯಿಂದ ಹಾಡುತ್ತಿರುವಾಗ ಗದ್ದಗಿಮಠರು ಅವರಿಗೆ ಗೊತ್ತಿಲ್ಲದಂತೆ ಮರೆಯಲ್ಲಿ ನಿಂತು ಹಾಡುಗಳನ್ನು ಬರೆದುಕೊಳ್ಳುತ್ತಿದ್ದುದನ್ನು ಕೊತ್ತಲ ಮಹದೇವಪ್ಪ ತಿಳಿಸುತ್ತಾರೆ.

ಗದ್ದಗಿಮಠ ಅವರು ಅಪ್ಪಟ ಗ್ರಾಮೀಣ ಸಂಸ್ಕೃತಿಯ ಪ್ರತಿನಿಧಿಯಂತಿದ್ದರು. ರೈತನಂತೆ ಸರಳ ವೇಷಭೂಷಣ ಹಾಕುತ್ತಿದ್ದರು. ಬೆಳಗಿನ ಐದು ಗಂಟೆಗೆ ಎದ್ದು ನೀರು ತರುವುದು, ಪ್ರಾತಃರ್ವಿಧಿಗಳನ್ನು ಮುಗಿಸಿ ಕೈತೋಟದ ಕೆಲಸ ಮಾಡುವುದು, ನಂತರ ವ್ಯಾಯಾಮ, ಸ್ನಾನ, ಲಿಂಗಾರ್ಚನೆ, ಊಟ – ಅವರ ನಿತ್ಯದ ಕಾರ್ಯವಾದುದರಿಂದ ಹಳ್ಳಿಗರೊಂದಿಗೆ ಬೆರೆಯುಲು ಅವರಿಗೆ ಅನುಕೂಲವಾಗಿತ್ತು. ಈಜುವುದನ್ನು ರೂಢಿಸಿಕೊಂಡಿದ್ದರು; ಕುಸ್ತಿಪಟುವೂ ಆಗಿದ್ದರು. ಲೌಕಿಕ ವಿಲಾಸೀ ಜೀವನಕ್ಕೆ ತಿಲಾಂಜಲಿಯನ್ನಿತ್ತಿದ್ದರು, ಜನಪದಕ್ಕಾಗಿಯೇ ತಮ್ಮ ಜೀವನವನ್ನು ಅರ್ಪಿಸಿದ್ದರು. ಹೀಗಾಗಿ ಈ ಕ್ಷೇತ್ರದಲ್ಲಿ ಸಾಕಷ್ಟು ಕಾರ್ಯ ಮಾಡಲು ಅವರಿಗೇ ಸಾಧ್ಯವಾಯಿತು. ಟೇಪ್‌ರಿಕಾರ್ಡರ್, ಕ್ಯಾಮೆರಾ.. ಯಾವುದೇ ಆಧುನಿಕ ಸಲಕರಣೆಗಳ ಸಹಾಯವಿಲ್ಲದೆಯೇ ಕೇವಲ ಕೈಬರಹದಲ್ಲಿಯೇ ಸಾವಿರಾರು ಜನಪದ ಹಾಡುಗಳನ್ನು ಕಲಾವಿದರ ಮನೆ ಬಾಗಿಲಿಗೆ ಹೋಗಿ, ಸಂಗ್ರಹಿಸಿದ ಶ್ರೇಯಸ್ಸು ಅವರದು. ಅನಕ್ಷರಸ್ಥರಿಂದ ಹಾಡು ಸಂಗ್ರಹಿಸುವಾಗಿನ ತೊಂದರೆಯನ್ನು ಅವರೇ ಹೀಗೆ ಹೇಳಿದ್ದರು : "ದೊಡ್ಡ ಹಾಡುಗಳನ್ನು ಸಂಕಲನ ಮಾಡುವುದು ಬಲು ಕಷ್ಟದ ಕೆಲಸ. ಇದಕ್ಕೆ ತಾಳ್ಮೆ ಬೇಕು. ಹಾಡುಗಳನ್ನು ಹಾಡುವವರು ವಿಶೇಷವಾಗಿ ಅವುಗಳನ್ನು ಬಾಯಿಪಾಠ ಮಾಡಿರುವುದೇ ಹೆಚ್ಚು. ಹಾಡುವಾಗ ಒಂದು ನುಡಿಯು ಮರೆತರೆ ಅವರಿಗೆ ಇಡೀ ಹಾಡು ನೆನಪಾಗದೆ ಅಷ್ಟಕ್ಕೆ ನಿಂತುಬಿಡುವುದು. ಆದುದರಿಂದ ಹಲಕೆಲವು ಹೆಣ್ಣುಮಕ್ಕಳು ಹಾಡುಬಂದರೂ ಹಾಡಲು ಒಪ್ಪುವುದಿಲ್ಲ. ಇಂತಹ ಪ್ರಸಂಗದಲ್ಲಿ ಸಂಕಲನ ಮಾಡುವುದೇ ದುಸ್ತರವಾಗುವುದು. ಒಮ್ಮೊಮ್ಮೆ ಸಂಕಲನಕಾರರು ಅವರು ಬೇಡಿದಷ್ಟು ಹಣತೆತ್ತು ಹಾಡಿಸುವ ಪ್ರಸಂಗವೂ ಬರುವುದು".

ಇವರ ತಂದೆ ನೂರೊಂದು ಶಿವಶರಣರ ಅಮೂಲ್ಯವಾದ ಹಂತಿಯು ಕಥನಕವನಗಳನ್ನು ಸುಗ್ಗಿಯ ಕಾಲದಲ್ಲಿ ಬೆಳಗು ಹರಿಯುವವರೆಗೂ ಬಲು ಹುಮ್ಮಸ್ಸಿನಿಂದ ಕೋಚೆತ್ತಿ ಹಾಡುತ್ತಿದ್ದರು. ಅವುಗಳ ನಿರರ್ಗಳ ಶೈಲಿ, ಕಥೆಯ ಬೆಡಗು, ರಸಪಾಕ, ಮಾರ್ದವತೆ, ನವೀನತೆ ಮೊದಲಾದವು ಗದ್ದಗಿಮಠ ಅವರ ಮನವನ್ನು ಸೆಳೆಯಲು ಕಾರಣವಾದುವು. ಅಂದಿನಿಂದ ಅವುಗಳ ಮಹತ್ವವನ್ನು ಅರಿತು ಬಿಡುವು ದೊರೆತಾಗ ಕಲೆಹಾಕುತ್ತ ಬಂದರು. ಇವರ ತಂದೆ ಹಂತಿಯಲ್ಲಿ ಹಾಡುವ ಶಿವಶರಣರ ಹಾಡುಗಳನ್ನು, ತಾಯಿಯು ತನ್ನ ಮೂವರು ಗೆಳತಿಯರೊಡನೆ ಅನೇಕ ಧಾಟಿಯಲ್ಲಿ ಶಿವಸೊಲ್ಲುಗಳನ್ನು ಹಾಕಿ, ಶ್ರಾವಣ ಮಾಸದಲ್ಲಿ ಹಾಡುತ್ತ ಬಂದಿದ್ದರು. ಅಲ್ಲದೆ, ಅವರು ಮಹಾಭಾರತ, ರಾಮಾಯಣ, ಮಳೆರಾಜನ ಹಾಡು, ಶಿವಶರಣೆ ಚೆನ್ನಮ್ಮನ ಹಾಡು, ಗುಣಸಾಗರಿಯ ಹಾಡು, ರಡ್ಡೇರ ಅವ್ವಣ್ಣಿಯ ಹಾಡು–ಇವೇ ಮೊದಲಾದ ದೊಡ್ಡಹಾಡುಗಳನ್ನು ಹಾಡುತ್ತಿದ್ದರೆಂದು 'ಕನ್ನಡ ಜಾನಪದ ಗೀತೆಗಳು' ಕೃತಿಯ ಅರಿಕೆಯಲ್ಲಿ ಗದ್ದಗಿಮಠರು ಹೇಳಿಕೊಂಡಿದ್ದಾರೆ. ತಂದೆ ಹಾಡುತ್ತಿದ್ದ ಶರಣರ ಹಂತಿ ಹಾಡುಗಳನ್ನು, ತಾಯಿ ಗೆಳತಿಯರೊಂದಿಗೆ ಹಾಡುತ್ತಿದ್ದ ಜನಪದದ ಇತರ ಹಾಡುಗಳನ್ನು ಗದ್ದಗಿಮಠ ಅವರು ಸಂಗ್ರಹಿಸಿದರು. ಇವರ ತಾಯಿ ಮದುವೆ, ಉಡಿ ತುಂಬುವ ಕಾರ್ಯಕ್ರಮ, ಬಸಿರು, ಬಾಣಂತಿತನ, ಮೊದಲಾದ ಮಂಗಲ ಪ್ರಸಂಗಗಳಲ್ಲಿ ಸಂಪ್ರದಾಯದ ಹಾಡುಗಳನ್ನು ತುಂಬ ಚೆನ್ನಾಗಿ ಹಾಡುತ್ತಿದ್ದರು. ಓಣಿಯವರು, ಊರಿನವರು, ಶುಭಸಂದರ್ಭದಲ್ಲಿ ಇವರ ತಾಯಿ ಶಿವಗಂಗಾದೇವಿಯನ್ನು ಕರೆಸಿ ಹಾಡಿಸುತ್ತಿದ್ದರು; ಸೀರೆ, ಕುಪ್ಪಸ, ಕಾಣಿಕೆಯ ರೂಪದಲ್ಲಿ ಕೊಡುತ್ತಿದ್ದರು. ತಾಯಿ ಹಾಡುತ್ತಿದ್ದ ಸಂಪ್ರದಾಯದ ಹಾಡುಗಳನ್ನು ಗದ್ದಗಿಮಠ ಅವರು ಸಂಗ್ರಹಿಸುತ್ತಿದ್ದರೆಂದು ಎಸ್.ಬಿ. ನಾಯಕರು ಹೇಳುತ್ತಾರೆ.

ಗದ್ದಗಿಮಠ ಅವರು ಹಾಡುಗಾರರಿದ್ದಲ್ಲಿಗೆ ಅವರನ್ನು ಹುಡುಕಿಕೊಂಡು ಹೋಗಿ ಅವರಿಂದ ಹಾಡುಗಳನ್ನು ಕೈಯಿಂದಲೇ ಬರೆದು ದಾಖಲಿಸಿಕೊಳ್ಳುತ್ತಿದ್ದರು. ತಮ್ಮ ತಾಯಿ ತಂದೆಯರಿಂದ ಹಾಡುಗಳನ್ನು ಸಂಗ್ರಹಿಸಿ, ಅವರ ಹೆಸರನ್ನು ದಾಖಲಿಸುತ್ತಾರೆ. ಆದರೆ ಇತರ ವ್ಯಕ್ತಿಗಳಿಂದ ಹಾಡುಗಳನ್ನು ಸಂಗ್ರಹಿಸಿದಾಗ ಅವರ ಹೆಸರನ್ನು ಎಲ್ಲಿಯೂ ದಾಖಲಿಸುವುದಿಲ್ಲ. ಇದು ಅವರ ತಪ್ಪು ಅಥವಾ ಅಪ್ರಾಮಾಣಿಕತೆ ಅಥವಾ ದೋಷವಲ್ಲ. ಜನಪದ ವಕ್ತೃಗಳ ಹೆಸರನ್ನು ದಾಖಲಿಸಬೇಕೆನ್ನುವ ವಿಚಾರ ಆರಂಭದ ಹಂತದಲ್ಲಿ ಅವರಿಗೆ ತೋಚಿದಂತೆ ಕಾಣುವುದಿಲ್ಲ. ಏನೇ ಆದರೂ ಬೇರೆ ಬೇರೆ ಕಡೆಗಳಲ್ಲಿರುವ ವಕ್ತೃಗಳಿಂದ ಜನಪದ ಹಾಡುಗಳನ್ನು ಸಂಗ್ರಹಿಸಿ, ವರ್ಗೀಕರಿಸಿ, ಸಂಕಲಿಸಿದ್ದಾರೆ. ಪ್ರಸ್ತಾವನೆ ಕೂಡ ಬರೆದಿದ್ದಾರೆ.

**೬. ಉಬಲಬ್ಧ ಸಾಹಿತ್ಯ :** 'ಜಾನಪದ ಕಾವ್ಯಮಾಲೆ' ಎಂಬ ಹೆಸರಿನ ಸ್ವಂತ ಪ್ರಕಟನ ಮಾಲೆ ಆರಂಭಿಸಿ ಅದರ ಅಡಿಯಲ್ಲಿ 'ನಾಲ್ಕು ನಾಡಪದಗಳು', 'ಕಂಬಿಯ ಹಾಡುಗಳು', 'ಮಲ್ಲಮಲ್ಲಾಣಿ', 'ಕುಮಾರ ರಾಮನ ದುಂದುಮೆ' ಗಳನ್ನು ಪ್ರಕಟಿಸಿದರು. ಹಾಗೆಯೇ 'ಜನತಾ ಗೀತೆಗಳು', 'ಲೋಕಗೀತೆಗಳು', 'ಕನ್ನಡ ಜಾನಪದ ಗೀತೆಗಳು', ಗದ್ದಗಿಮಠರ ಬರಹಗಳು ಮತ್ತು ಇತರ 'ಜನಪದ ಲೇಖನ'ಗಳು ಇವೇ ಮುಂತಾದವು ಗದ್ದಗಿಮಠರ ಉಪಲಬ್ಧ ಜನಪದ ಸಾಹಿತ್ಯ ಪ್ರಕಟನೆಗಳು.

**ನಾಲ್ಕು ನಾಡಪದಗಳು (1952) :** ಪ್ರಸ್ತುತ ಸಂಕಲನದಲ್ಲಿ 'ಬಿಜ್ಜಮಹಾದೇವಿ', ಜೇಡರ ಕನ್ನಯ್ಯ, ಕೋಳೂರ ಕೊಡಗೂಸು, ಗೊಲ್ಲಾಳ – ಇವೇ ಮುಂತಾದ ತ್ರಿಪದಿ ರೂಪದ ಕಥನಗೀತಗಳಿವೆ. ಇಲ್ಲಿರುವವರೆಲ್ಲ ಶಿವಭಕ್ತರು. ಆಯಾ ಹಾಡುಗಳಲ್ಲಿ ಅವರವರ ಜೀವನಾನುಭವಗಳ

ಅಭಿವ್ಯಕ್ತಿಯಿದೆ. ಈ ಎಲ್ಲ ಹಾಡುಗಳನ್ನು ಸಕ್ರಮವಾಗಿ ಸಂಕಲಿಸಿದ್ದಾರೆ. ಇವುಗಳನ್ನು ಒಂದರ್ಥದಲ್ಲಿ ಖಂಡಕಾವ್ಯಗಳೆಂತಲೂ ಕರೆಯಬಹುದು. ಪ್ರಸ್ತುತ ಸಂಕಲನಕ್ಕೆ ಪಿ.ಜಿ. ಕುಲಕರ್ಣಿ ಮುನ್ನುಡಿ ಬರೆದಿದ್ದಾರೆ. ತಮ್ಮ 'ಜಾನಪದ ಕಾವ್ಯ ಮಾಲೆ' ಯ ಪ್ರಥಮ ಕುಸುಮವಾಗಿ 'ನಾಲ್ಕು ನಾಡಪದಗಳು' ಸಂಕಲನವನ್ನು ಗದ್ದಗಿಮಠರು ಪ್ರಕಟಿಸಿದರು.

**ಕಂಬಿಯ ಹಾಡುಗಳು (1955) :** ಇದರಲ್ಲಿ ಶ್ರೀ ಶೈಲ ಮಲ್ಲಿಕಾರ್ಜುನ (ಮಲ್ಲಯ್ಯ) ನನ್ನು ಕುರಿತ ಕಂಬಿಯ ಹಾಡುಗಳಿವೆ; ಕಂಬಿ ಸಂಪ್ರದಾಯದ ಬಿರುದಾವಳಿ, ಮಂಗಳಾರತಿ ಹಾಡುಗಳಿವೆ. ಕಂಬಿಯ ಹಾಡು-ಉರ್ದುಮಿಶ್ರಿತ ಕಂಬಿಯ ಹಾಡುಗಳೂ ಇವೆ. ಪ್ರಕೃತ ಸಂಕಲನಕ್ಕೆ ಸುಮಾರು 20 ಪುಟಗಳ ದೀರ್ಘ ಪ್ರಸ್ತಾವನೆ ಬರೆದಿದ್ದರೆ, ಅದರಲ್ಲಿ ಕಂಬಿಗಳು ಶ್ರೀ ಶೈಲದ ಮಲ್ಲಯ್ಯನನ್ನು ಕುರಿತ ವಿವರಣೆ ನೀಡಿದ್ದಾರೆ. ಕಂಬಿ ಸಂಪ್ರದಾಯ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿದೆ. ಇಲ್ಲಿಯ ಹಾಡುಗಳೆಲ್ಲ ಕಂಬಿ ಸಂಪ್ರದಾಯವನ್ನೇ ಪ್ರತಿಬಿಂಬಿಸುತ್ತವೆ.

**ಜನತಾಗೀತೆಗಳು (1956) :** ಇದರಲ್ಲಿ ದೀರ್ಘವಾದ ಹಾಡುಗಳನ್ನು ಸಂಕಲಿಸಲಾಗಿದೆ. ಸಂಪ್ರದಾಯದ ಹಾಡುಗಳು, ಹಂತಿ ಹಾಡುಗಳು, ಹಂತಿ ಹಾಡುಗಳಲ್ಲಿಂಯೇ ಐತಿಹಾಸಿಕ ಘಟನಾವಳಿಗಳು, ಹೋಳಿಹಾಡುಗಳು, ದುಂದುಮೆ ಪದಗಳು, ಬೀಸುವ ಹಾಡುಗಳು ಮತ್ತು ಇತರ ಹಾಡುಗಳೆಂದು ವ್ಯವಸ್ಥಿತವಾಗಿ ಸಂಗ್ರಹಿಸಿದ್ದಾರೆ. ಇಲ್ಲಿಯ 'ದೊಡ್ಡಹಾಡುಗಳು' ಶೀರ್ಷಿಕೆಯಡಿಯಲ್ಲಿ ಬರುವ ನರಗುಂದ, ಕಿತ್ತೂರಿನ ಹಾಡುಗಳಲ್ಲಿ ದುರಂತತೆಯನ್ನು ಪ್ರತಿಬಿಂಬಿಸುವ ವಿವರಗಳಿವೆ; ಜನಪದ ಕವಿಯ ಕಳವಳ, ಅಸಹಾಯಕತೆ, ಕಂಬನಿ ಒಡಮೂಡಿವೆ. 'ಬೀಸುವ

ಹಾಡುಗಳು' ಶೀರ್ಷಿಕೆಯಲ್ಲಿ ಬರುವ 'ಕರ್ನಾಟಕ ಕಂದ' (ಕುಮಾರರಾಮ)ದಲ್ಲಿ ಕುಮಾರರಾಮನ ಮೇಲೆ ಬಂದ ಹರಲಿ (ಅಪವಾದ) ಯನ್ನು ಕಂಡು ಜನಪದ ಕವಯಿತ್ರಿ ಕಂಬನಿ ಮಿಡಿದು ಹಾಡಿದ್ದಾಳೆ. 'ಇತರ ಹಾಡುಗಳು' ಅಡಿಯಲ್ಲಿ ಬಂದ 'ದಾಸಿಮಯ್ಯ'ನ ಹಾಡಿನಲ್ಲಿ ಅವನ ಭಕ್ತಿಯು ಪರಾಕಾಷ್ಠೆಯು ಬಣ್ಣನೆಯಿದೆ. 'ಗುಜಗುಜಮಾಪುರಿ' ಯಂಥ ಮಕ್ಕಳ ಆಟದಲ್ಲಿ ಮದುವೆಯ ಉದ್ದೇಶ ವಿವರಿಸಲ್ಪಟ್ಟಿದೆ. ಈ ವ್ಯಾಪಕವಾದ ಜನಪದ ಸಾಹಿತ್ಯ ಸಂಗ್ರಹದಲ್ಲಿ ವಿಷಯ ವೈವಿಧ್ಯ ಮತ್ತು ಲಯವೈವಿಧ್ಯಗಳನ್ನು ಗುರುತಿಸಬಹುದು.

**ಮಲ್ಲಮಲ್ಲಾಣಿ (1959)** : ಇದನ್ನು 'ಮಹಾಶೃಂಗಾರ ಹಾಡುಗಬ್ಬ' ವೆಂತಲೂ ಗದ್ದಗಿಮಠರು ಹೆಸರಿಸಿದ್ದಾರೆ; ಇದು ದೀರ್ಘ ಕಥಾನಕವನ್ನೊಳಗೊಂಡಂಥದು. ಇದನ್ನು ಹಾಡಿದವರು ಜನಪದ ಕವಯಿತ್ರಿ ಶಾವಂತ್ರಾದೇವಿ ಎಂದು ಸಂಗ್ರಾಹಕ ಗದ್ದಗಿಮಠ ಅವರೇ ತಿಳಿಸಿದ್ದಾರೆ. ಹರಿಹರಕವಿಯ ಮಲುಹಣನ ರಗಳೆಯ ಕಥೆಯನ್ನು ಇದು ಹೋಲುತ್ತದೆಯಾದರೂ ಕಥೆಯಲ್ಲಿ ಕೆಲವಾರು ವ್ಯತ್ಯಾಸಗಳನ್ನು ಮಾಡಿಕೊಂಡಿದೆ. ಇಲ್ಲಿ ಮಲುಹಣ-ಮಲುಹಣಿಯರ ರೂಪ-ಲಾವಣ್ಯ, ಉತ್ಕಟ ಪ್ರೀತಿ, ಶಿವಪೂಜೆಯ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಈ ಕಥನವು ಪೀಠಿಕೆ, ಮಲ್ಲಣನ ಬೇಟೆ, ಮಲ್ಲಮಲ್ಲಾಣಿ ಸೋಬತಿ, ಶಿವದರ್ಶನ ಇತ್ಯಾದಿ ನಾಲ್ಕು ಭಾಗಗಳಲ್ಲಿ ತೆರೆದುಕೊಂಡಿವೆ.

**ಕುಮಾರ ರಾಮನ ದುಂದುಮೆ (1959)** : ಕುಮಾರರಾಮನ ಚಾರಿತ್ರಿಕ ವಿಷಯವನ್ನು ನಿರೂಪಿಸುವ ಹಾಡುಗಳು 'ಕುಮಾರ ರಾಮನ ದುಂದುಮೆ' ಯಲ್ಲಿವೆ. ಚಾರಿತ್ರಿಕ ಘಟನಾವಳಿಗಳನ್ನು ಅನುಲಕ್ಷಿಸಿ ಇದನ್ನು ಗದ್ದಗಿಮಠರು ಸಂಕಲಿಸಿದ್ದಾರೆ. ಇದು ಮೊಟ್ಟಮೊದಲು 'ಪ್ರಬುದ್ಧ ಕರ್ನಾಟಕ' ದಲ್ಲಿ ಪ್ರಕಾಶಿತಗೊಂಡು ನಂತರ ಇವರ 'ಜಾನಪದ ಕಾವ್ಯ

ಮಾಲೆ'ಯು ನಾಲ್ಕನೇ ಕುಸುಮವಾಗಿ ಅರಳಿದೆ. ಇದರಲ್ಲಿ ಕುಮಾರರಾಮನ ಜನನ, ಹೋಲ್ಕಿಯ ರಾಮ ಹಾಗೂ ಬೊಲ್ಲರ ಜನನ, ಕುಮಾರರಾಮನ ಚೆಂಡಿನಾಟ ಅವನ ಮೇಲೆ ರತ್ನಾಲಿ (ರತ್ನಾಜಿ) ಹೊರಿಸಿದ ಆರೋಪ/ಅಪವಾದ ಅವನಿಗೋಸ್ಕರ ಹೋಲ್ಕಿಯರಾಮ ಆಹುತಿಯಾದ ಸಂದರ್ಭಗಳು ವರ್ಣಿತವಾಗಿವೆ. ಹೋಲ್ಕಿರಾಮ ಸ್ವೇಚ್ಛೆಯಿಂದ ತನ್ನ ತಲೆಯನ್ನು ಕುಮಾರರಾಮನಿಗೆ ಪ್ರತಿಯಾಗಿ ಕೊಟ್ಟಾಗ ಅವನ ಹೆಂಡತಿ ಪದ್ಮಿನಿ ಗೋಳಿಡುವ ದೃಶ್ಯ ಕರುಣ ರಸಾರ್ದ್ರವಾಗಿದೆ. ಅಲ್ಲಿ ಬರುವ ಉಪಮೆಗಳು ಕವಿಯ ತೀವ್ರ ನಿರೀಕ್ಷಣೆಗೆ, ಸುಂದರ ಅಭಿವ್ಯಕ್ತಿಗೆ ನಿದರ್ಶನವಾಗಿವೆ. ಇದರಲ್ಲಿ ಒಟ್ಟು 131 ಪದ್ಯಗಳಿವೆ. ಪೀಠಿಕೆಯಲ್ಲಿ ದುಂದುಮೆ, ದುಂದುಭಿ, ಹಾಡುಗಬ್ಬಗಳ, ದುಂದುಮೆಗಬ್ಬಗಳ ಕುರಿತು ವಿಸ್ತಾರವಾಗಿ ಬರೆಯಲಾಗಿದೆ. ಇದು ಗದ್ದಗಿಮಠರ ಮಹತ್ವದ ಸಂಶೋಧನೆ–ಕುಮಾರರಾಮನನ್ನು ಕುರಿತ ಉತ್ತಮ ಆಕರ.

**ಲೋಕಗೀತೆಗಳು (1960) :** ಈ ಕೃತಿಯನ್ನು ಮೈಸೂರು ರಾಜ್ಯದ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಇಲಾಖೆ ಪ್ರಕಟಿಸಿದೆ. ಇದು ಉತ್ತಮ ಸಂಕಲನವೆಂದು ಬಹುಮಾನ ಪಡೆದಿದೆಯೆಂದು ಹೇಳಲಾಗುತ್ತಿದೆ. ಗದ್ದಗಿಮಠರು ಇಲ್ಲಿ 'ಸೋಬಾನ ಹಾಡುಗಳು' ಮತ್ತು 'ಕೋಲುಪದಗಳು' ಎನ್ನುವ ಎರಡು ಭಾಗಗಳನ್ನು ಮಾಡಿಕೊಂಡು ಹಾಡುಗಳನ್ನು ಸಂಕಲಿಸಿದ್ದಾರೆ. ಸೋಬಾನ ಹಾಡುಗಳಲ್ಲಿ ಮದುವೆಯ ಸೋಬಾನಗಳು ಮತ್ತು ಮಂಗಳ ಸೋಬಾನಗಳನ್ನು ಸೇರಿಸಿದ್ದಾರೆ. ಕೋಲುಪದಗಳಲ್ಲಿ 'ಗೌರಿ–ಸೀತೆಯ ಕೋಲು ಪದಗಳು', 'ನಾಡಕೋಲು ಪದಗಳು', 'ಕಿತ್ತೂರು ಕೋಲು ಪದಗಳು' ಸೇರಿಕೊಂಡಿವೆ. 'ಕಿತ್ತೂರು ಕೋಲು ಪದಗಳು' ಚಾರಿತ್ರಿಕ ಅಂಶಗಳನ್ನು ಒಳಗೊಂಡ ಹಾಡುಗಳಾಗಿವೆ.

ಈ ಹಾಡುಗಳನ್ನು ಹಾಡುವ ಸಂದರ್ಭ, ವಿಶೇಷತೆಯನ್ನು ಲೇಖಕರು ತಿಳಿಸುತ್ತಾರೆ. ಗ್ರಂಥದಲ್ಲಿಯ ಲೇಖಕರ ಪ್ರಸ್ತಾವಿಕ ಮಾತುಗಳು ಅಭ್ಯಾಸಪೂರ್ಣವಾಗಿವೆ.

ಗದ್ದಗಿಮಠ ಅವರು ಹೊರತಂದಿರುವ ಎಲ್ಲ ಜನಪದ ಸಂಕಲನಗಳಿಗೂ ಪರಿಚಯಾತ್ಮಕ ದೀರ್ಘವಾದ ಮುನ್ನುಡಿ, ಮೊದಲ ಮಾತು, ಅರಿಕೆ ಇತ್ಯಾದಿ ಬರೆದಿದ್ದಾರೆ; ಅವು ಮಹತ್ವದ ಪ್ರಸ್ತಾವನೆಗಳೂ ಆಗಿವೆ. ಜನಪದ ಸಾಹಿತ್ಯದ ಬಗೆಗಿನ ತಮ್ಮ ತಿಳಿವಳಿಕೆ ಕಾಳಜಿ, ಯೋಚನೆ-ಯೋಜನೆಗಳನ್ನು ಕುರಿತು ಬರೆದಿದ್ದಾರೆ. ತಾವು ಸಂಕಲಿಸಿದ ಕೃತಿಗಳಿಗೆ ಕೊನೆಯಲ್ಲಿ ಅರ್ಥಕೋಶ, ಶಬ್ದಕೋಶಗಳನ್ನು ನೀಡಿದ್ದಾರೆ. ಇದು ಅಧ್ಯಯನಕ್ಕೆ ಅನುಕೂಲವಾಗಿದೆ. 'ಜಾನಪದ ಮಹಾಶಬ್ದಕೋಶ' ರಚಿಸುವುದರ ಅಗತ್ಯವನ್ನು ಗದ್ದಗಿಮಠ ಅವರು ಅಂದೇ ಕಂಡುಕೊಂಡಿದ್ದುದು ಗಮನಾರ್ಹ.

ವಿಷಯಾನುಸಾರ, ಕಥಾನುಸಾರ, ಸಂದರ್ಭಾನುಸಾರ ಮತ್ತು ಸಂಪ್ರದಾಯಾನುಸಾರ ತಮ್ಮ ಇಲ್ಲಿಯ ಸಂಗ್ರಹದ ಹಾಡುಗಳನ್ನು ಗದ್ದಗಿಮಠರು ಸಂಕಲಿಸಿದ್ದಾರೆ. ಈ 'ಜಾನಪದ ಕಾವ್ಯ ಮಾಲೆ' ಯನ್ನು ತಮ್ಮ ಕೊನೆ ಉಸಿರಿರುವವರೆಗೂ ನಡೆಯಿಸಿದ್ದು ಅವರ ಪುಸ್ತಕ ಪ್ರೀತಿಗೆ ನಿದರ್ಶನ. ಜನಪದ ಸಾಹಿತ್ಯದ ಪ್ರತಿ ವಿಷಯವೂ ಅವರಿಗೆ ಮಹತ್ವದ್ದು; ಅಂತೆಯೇ ಜನಪದ ವಿಷಯವನ್ನು ಸದಾ ಗುರುತು ಹಾಕಿಕೊಳ್ಳುವುದನ್ನು ಒಂದು ಹವ್ಯಾಸವಾಗಿರಿಸಿಕೊಂಡಿದ್ದರು. ಜನಪದ ಸಾಹಿತ್ಯವನ್ನು ತುಂಬ ಆಲಿಸಿದ್ದಾರೆ; ಸಾಹಿತ್ಯ ಕೃತಿಗಳನ್ನು ಓದಿದ್ದಾರೆ. ಇದಕ್ಕಾಗಿ ಸಾಕಷ್ಟು ವೇಳೆಯನ್ನು ಉಪಯೋಗಿಸಿಕೊಂಡಿದ್ದಾರೆ. ಗದ್ದಗಿಮಠ ಅವರು ಪ್ರತಿಯೊಂದು ವಿಷಯದಲ್ಲಿ ಕುತೂಹಲಿಯಾಗಿದ್ದರು; ಚಿಕಿತ್ಸಕ ಮನೋಧರ್ಮದವರಾಗಿದ್ದರು. ಅಂತೆಯೇ ಹಳ್ಳಿಗರ ಪ್ರತಿಯೊಂದು

ಕಾರ್ಯಚಟುವಟಿಕೆ, ರೂಢಿ ಸಂಪ್ರದಾಯಗಳಲ್ಲಿರುವ ಸೂಕ್ಷ್ಮತೆಯನ್ನು ಗುರುತಿಸುವತ್ತಲೂ ಗಮನ ಹರಿಸುತ್ತಾರೆ. ಹಳ್ಳಿಗರು ಅದರಲ್ಲಿಯೂ ರೈತರು ಇರುವೆಗಳಿಗೆ ಸಕ್ಕರೆ ಹಾಕುವುದು ಒಂದು ಸಂಪ್ರದಾಯ. ಇದನ್ನು ನೋಡಿ ಅರಿತು ತಾವೂ ಇರುವೆಗಳಿಗೆ ಸಕ್ಕರೆ ಹಾಕತೊಡಗಿದರು. ನೆಲದ ಬದುಕು-ಸಂಸ್ಕೃತಿಯನ್ನು ಪ್ರೀತಿಸಲು ಇಂಥ ಸಣ್ಣಪುಟ್ಟ ಕಾರ್ಯಗಳೂ ಅವರ ನೆರವಿಗೆ ಬಂದುದುಂಟು.

**ಕನ್ನಡ ಜಾನಪದ ಗೀತೆಗಳು (1963) :** ಡಾ.ಬಿ.ಎಸ್. ಗದ್ದಗಿಮಠ ಅವರು ತಮ್ಮ ಸಂಕಲನದ ಹಾಡುಗಳನ್ನು ಆಧರಿಸಿ 'ಕನ್ನಡ ಜಾನಪದ ಗೀತಗಳು' ಮಹಾಪ್ರಬಂಧ ರಚಿಸಿದ್ದಾರೆ. ತಮ್ಮ ಮಹಾಪ್ರಬಂಧ ರಚನೆಗೆ ಬೇಕಾದ, ತಾವೇ ಸಂಗ್ರಹಿಸಿದ ಬಿಡಿಹಾಡುಗಳನ್ನು ಮಾತ್ರ ಬಳಸಿಕೊಂಡಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಅನುಬಂಧದಲ್ಲಿ ಹಂತಿಯ ಹಾಡುಗಳ ಹೆಸರಿನಲ್ಲಿ ಕಲ್ಯಾಣ ಬಸವಯ್ಯ, ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ಕುಂಬಾರ ಗುಂಡಯ್ಯ, ಕಿನ್ನರಿ ಬೊಮ್ಮಯ್ಯ, ಇಳಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ, ಜಾತಿಗರ ಚೌಡಯ್ಯ, ನೇಗಿಯ ಅಮುಗಯ್ಯ, ಮಾದರ ಚೆನ್ನಯ್ಯ, ಹರಳಯ್ಯ, ಇತ್ಯಾದಿ ಹನ್ನೊಂದು ಶಿವಶರಣರ ಕಥನಕವನಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಇವೆಲ್ಲ 'ಸಾವಳಿಗೆಯ್ಯ' ಎಂಬ ಜನಪದ ಕವಿಯ ಗೀತಗಳಾಗಿವೆ; ಇವು ತ್ರಿಪದಿ ರೂಪದಲ್ಲಿವೆ. ಅನುಬಂಧದ ಕೊನೆಗೆ ತುಂಬ ದೀರ್ಘವಾದ ಅರ್ಜುನ ಜೋಗಿಯು ಹಾಡುಗಬ್ಬವೊಂದನ್ನು ಸಂಕಲಿಸಿಕೊಟ್ಟಿದ್ದಾರೆ. ಇದನ್ನು ಕೆರೂರಿನ ಗದ್ದಗಿಮಠದ ಹಾಡುಮ್ಯಾಳದ ನಾಲ್ವರು ಮಹಿಳೆಯರು ಹಾಡಿದ್ದಾರೆ. ಈ ಹಾಡುಗಳನ್ನು ಗದ್ದಗಿಮಠರು ಅತ್ಯಂತ ಸರಳ ವಿಧಾನ-ಕೈಯಿಂದಲೇ ಬರೆದು ಸಂಗ್ರಹಿಸಿ ಸಂಕಲಿಸಿದ್ದಾರೆ.

ಮಹಾಪ್ರಬಂಧ ಬರೆಯುವ ಮುನ್ನ ಸ್ವತಃ ಪ್ರಕಟಿಸಿದ ನಾಲ್ಕೈದು ಜನಪದ ಸಂಕಲನಗಳಲ್ಲಿಯ ಹಾಡುಗಳೊಂದಿಗೆ, ಆಗಲೇ ಪ್ರಕಟಿಸಿದ ತಮ್ಮ ಜನಪದ ಲೇಖನಗಳು, ಪ್ರಬಂಧಗಳು ಮುಂತಾದವನ್ನು ಮಹಾಪ್ರಬಂಧ ರಚನೆಗೆ ಧಾರಾಳವಾಗಿ ಬಳಸಿಕೊಂಡಿದ್ದಾರೆ.

ಗದ್ದಗಿಮಠ ಅವರ ಜಾನಪದದ ಆಸಕ್ತಿ, ಪ್ರೀತಿ, ಶ್ರದ್ಧೆ, ನಿಷ್ಠೆ, ಪರಿಶ್ರಮಗಳ ಪ್ರತಿಫಲವೇ ಈ ಸಂಶೋಧನ ಮಹಾಪ್ರಬಂಧ. ಬಹಳ ಹಿಂದೆ ಬರೆದ ಪ್ರಬಂಧವಿದು; ವೈಜ್ಞಾನಿಕ ಅಧ್ಯಯನ, ಜನಪದ ಸಾಹಿತ್ಯ ವಿಮರ್ಶೆ ಇವಾವೂ ಇನ್ನೂ ಕಣ್ಣುಬಿಟ್ಟಿರಲಿಲ್ಲ. ಅಂಥ ಕಾಲದಲ್ಲಿ ರಚಿತವಾದುದು. ಗದ್ದಗಿಮಠರ ಜನಪದ ನಿಷ್ಠೆ ಮತ್ತು ಸಾಹಸ ಪ್ರವೃತ್ತಿಯ ಫಲಿತವಾಗಿ ಮೂಡಿಬಂದ ಈ ಮಹಾಪ್ರಬಂಧದಲ್ಲಿ ಕೆಲವು ಕೊರತೆಗಳಿರಬಹುದು. ಆದರೆ ಅಂದು ಅವರು ಗೈದ ಸಾಧನೆ ಮಹತ್ತರವಾದುದು. ಸ್ಮರಣೀಯವಾದುದು.

ಗದ್ದಗಿಮಠರ ಮೂಲ ಪ್ರಬಂಧದಲ್ಲಿಯ ಕೆಲವು ವಿಷಯ ಬಿಟ್ಟು, ಸ್ತುತಿಪದಗಳು, ಸುಗ್ಗಿಹಾಡುಗಳು, ಹಳ್ಳಿಯ ಕುಣಿತಗಳು, ಮಕ್ಕಳ ಆಟ-ಹಾಡುಗಳು, ಹಾಸ್ಯದ ಹಾಡುಗಳು, ರಸನಿಮಿಷಗಳು, ರಸಾವೇಶದ ಹಾಡುಗಳು, ಬಾಳಿನಲ್ಲಿ ಆಸರಿಕೆ ಬೇಸರಿಕೆ, ಪ್ರಣಯ ಹಾಗೂ ದಾಂಪತ್ಯ, ಸುಗ್ಗಿಯ ಸಂಪ್ರದಾಯ, ಹಳ್ಳಿಯ ಹಬ್ಬಗಳು, ಹಂತಿಯ ಹಾಡುಗಳು, ಜಾನಪದ ಛಂದಸ್ಸು ಇತ್ಯಾದಿ ಹದಿಮೂರು ಅಧ್ಯಾಯಗಳಲ್ಲಿ ಮಹಾಪ್ರಬಂಧ ಬಿಚ್ಚಿಕೊಂಡಿದೆ. ಕೊನೆಗೆ ಸಹಾಯಕ ಸಾಹಿತ್ಯವನ್ನು ಕೊಟ್ಟಿದ್ದಾರೆ. ಪ್ರಸ್ತಾವನೆಯಲ್ಲಿ ಈವರೆಗೆ ಪಾಶ್ಚಾತ್ಯರಲ್ಲಿ ಮತ್ತು ಪೂರ್ವಾತ್ಯರಲ್ಲಿ ಜಾನಪದದ ಬಗೆಗೆ ಇರುವ ತಿಳಿವಳಿಕೆ ಸೂಚಿಸಿದೆ.

ಪ್ರೊ. ಕೆ.ಜಿ. ಕುಂದಣಗಾರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪ್ರಸ್ತುತ ಮಹಾಪ್ರಬಂಧವನ್ನು ಧಾರವಾಡ ಕ.ವಿ.ವಿ.ಕ್ಕೆ

ಸಾದರಪಡಿಸಿ, 1954ರಲ್ಲಿ ಪಿಎಚ್.ಡಿ. ಪದವಿಯನ್ನು ಗದ್ದಗಿಮಠ ಅವರು ಗಿಟ್ಟಿಸಿಕೊಂಡಿದ್ದಾರೆ.

ಜನಪದ ಗೀತಸಾಹಿತ್ಯದ ಸಂಗ್ರಹ, ಸಂಕಲನ, ಅಧ್ಯಯನಕ್ಕೆ ನಾಂದಿ ಹಾಡಿದ ಬಿ.ಎಸ್. ಗದ್ದಗಿಮಠ ಅವರು ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಜಾನಪದ ಸಂಶೋಧನೆಯನ್ನು ಕೈಗೊಂಡು, ಜಾನಪದ ಕ್ಷೇತ್ರದ ತಮ್ಮ ವಿದ್ವತ್ತಿನ ಪರಿಚಯವನ್ನು ನೀಡಿದರು. "ಜಾನಪದಕ್ಕೆ ಸಂಬಂಧಿಸಿದಂತೆ ಡಾಕ್ಟರೇಟ ಪದವಿಯನ್ನು ಪಡೆದ ಭಾರತೀಯ ವಿದ್ವಾಂಸರ ಶ್ರೇಣಿಯಲ್ಲಿ ಇವರು ಮೊದಲ ಶ್ರೇಣಿಗೆ ಸೇರುತ್ತಾರೆ. ಡಾ. ಗದ್ದಗಿಮಠರ ಪ್ರಯತ್ನದಿಂದ ವಿಶ್ವವಿದ್ಯಾಲಯ ಕರ್ನಾಟಕ ಜಾನಪದವನ್ನು ಒಂದು ಮೌಲಿಕವಾದ ಅಧ್ಯಯನ ವಿಷಯವೆಂದು ಮೊದಲು ಗುರುತಿಸಲು ಸಾಧ್ಯವಾಯಿತು. ಈವರೆಗೆ ಕನ್ನಡದಲ್ಲಿ ಕೆಲಸ ಮಾಡಿದ ವಿದ್ವಾಂಸರಾರೂ ಈ ನಿಟ್ಟಿನಲ್ಲಿ ಯೋಚಿಸಿರಲಿಲ್ಲ" (ಗದ್ದಗಿಮಠರ ಬರಹಗಳು–ಗ್ರಂಥ ಕುರಿತು–1988) ಎಂದು ಜಾನಪದದ ಘನವಿದ್ವಾಂಸ ಜೀಶಂಪ ಅವರು ಮಹತ್ವದ ಮಾತನ್ನಾಡಿದ್ದಾರೆ.

ಜಾನಪದವು ಪಿಎಚ್.ಡಿ. ಅಂಥ ಗಂಭೀರ ವಿಷಯದ ವಸ್ತುವಾಗಬಲ್ಲುದೆಂಬುದನ್ನು ಮೊಟ್ಟಮೊದಲು ತೋರಿದ ಪ್ರಬಂಧವಿದು. ಗದ್ದಗಿಮಠರ ಕೃತಿಗಳಲ್ಲಿಯೇ ಮೌಲಿಕ ಕೃತಿಯಿದು. ಜನಪದ ಕ್ಷೇತ್ರದಲ್ಲಿ ಅಧ್ಯಯನಿಸುವವರಿಗೆ, ಪಿಎಚ್.ಡಿ ಕೈಕೊಳ್ಳುವವರಿಗೆ ದಾರಿತೋರಿದ ಧೈರ್ಯ ತುಂಬಿದ ಗ್ರಂಥವಿದು. ಗದ್ದಗಿಮಠರ ವಿಸ್ತಾರವಾದ ರಸವಿಮರ್ಶೆಯನ್ನು ಈ ಸಂಶೋಧನೆಯಲ್ಲಿ ಗುರುತಿಸಬಹುದು. ಇವರ ಈ ಸಂಶೋಧನ ಕೊಡುಗೆ ಸದಾ ಸ್ಮರಣೀಯ.

**ಗದ್ದಗಿಮಠರ ಬರಹಗಳು (1988) :** 1950–60ರ ದಶಕದಲ್ಲಿ ಗದ್ದಗಿಮಠರಷ್ಟು ವಿಸ್ತಾರವಾದ ಜನಪದ ಕ್ಷೇತ್ರಕಾರ್ಯ ಮಾಡಿದವರು

ಇನ್ನೊಬ್ಬರಿಲ್ಲ. ಉತ್ತರ ಕರ್ನಾಟಕದ ಜನಪದ ಪ್ರಕಾರಗಳ ಮೇಲೆ ಅಧಿಕೃತವಾಗಿ ಮಾತನಾಡಬಲ್ಲ ಬರೆಯಬಲ್ಲ ಸಾಮರ್ಥ್ಯಹೊಂದಿದ್ದರು. ಉತ್ತರ ಕರ್ನಾಟಕದ ಸಂಸ್ಕೃತಿ, ಪರಂಪರೆ ಮತ್ತು ಸಂಪ್ರದಾಯಗಳ ಮೇಲೆ ಅಧಿಕೃತವಾಗಿ ಬರೆದ ಮತ್ತು ಮಾತನಾಡಿದ ಅಪೂರ್ವ ಕವಿ-ವಿದ್ವಾಂಸ ಬೆಟಗೇರಿ ಕೃಷ್ಣಶರ್ಮರಂತೆಯೇ ಉತ್ತರ ಕರ್ನಾಟಕದ ಜನಪದ ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳ ಮೂಲ ವಿಚಾರವನ್ನು ಕುರಿತು ಮೊಟ್ಟಮೊದಲು ಜನಪದ ಗೀತಸಾಹಿತ್ಯದ ಆಧಾರದಿಂದ ಅಧಿಕೃತವಾಗಿ ಬರೆದವರು ಗದ್ದಗಿಮಠರು. ಜನಪದ ಸಂಪ್ರದಾಯಗಳ ಮೇಲೆ, ಜನಪದ ಸಾಹಿತ್ಯದ ಮೇಲೆ, ದೊಡ್ಡಾಟ ಮುಂತಾದ ರಂಗಕಲೆಗಳ ಮೇಲೆ ಸಾಕಷ್ಟು ಅನುಭವ ಮತ್ತು ಜ್ಞಾನ ಪಡೆದಿದ್ದರು ಎಂಬುದಕ್ಕೆ ಅವರ ಪಿಎಚ್.ಡಿ ಮಹಾಪ್ರಬಂಧ ಮತ್ತು ಅವರ ಬಿಡಿ ಬರೆಹಗಳೇ ಸಾಕ್ಷಿ. ಇವರ ಹಲವಾರು ಬಿಡಿ ಲೇಖನಗಳು ವಿದ್ವತ್ ಪತ್ರಿಕೆಗಳಲ್ಲಿ ಬೆಳಕುಕಂಡಿವೆ. 'ಕರ್ನಾಟಕದ ದುರಗಮುರಗಿಯರು' ಎಂಬ ಪ್ರಬಂಧ ಧಾರವಾಡ 'ಜೀವನ-ಶಿಕ್ಷಣ' ವೆಂಬ ಶೈಕ್ಷಣಿಕ ಮಾಸಿಕದಲ್ಲಿ ಪ್ರಕಟವಾಗಿದೆ. 'ಕನ್ನಡ ಲಾಲಿ ಜೋಗುಳ' ಎಂಬುದು 'ಕರ್ಮವೀರ' ದೀಪಾವಳಿ ಪತ್ರಿಕೆ (1960) ಯಲ್ಲಿ ಪ್ರಕಟವಾಗಿದೆ. 'ಅನುಭಾವ ಸಾಹಿತ್ಯ' ವೆಂಬ ಪ್ರಬಂಧ 'ಪ್ರಬುದ್ಧ ಕರ್ನಾಟಕ' ದಲ್ಲಿ (42-43) ಪ್ರಕಟವಾಗಿದೆ. ಇವೂ ಸೇರಿದಂತೆ 'ಕನ್ನಡ ಬಯಲಾಟ', 'ಕಂಬಿಯ ಪದಗಳು', 'ಗುರ್ಚಿ', 'ಜೋಕುಮಾರ' 'ಸಂಪ್ರದಾಯಗಳು' ಕುರಿತು ಬರೆದ ಸಂಶೋಧನ ಲೇಖನಗಳು - ಇನ್ನಿತರ ಅಪ್ರಕಟಿತ ಜನಪದ ಸಂಬಂಧಿ ಲೇಖನಗಳನ್ನೆಲ್ಲ ಶೋಧಿಸಿ, ಸಂಗ್ರಹಿಸಿ 'ಗದ್ದಗಿಮಠರ ಬರಹಗಳು' ಶೀರ್ಷಿಕೆಯ ಅಡಿಯಲ್ಲಿ 'ಜೀಶಂಪ' ಅವರು ಸಂಪಾದಿಸಿಕೊಟ್ಟಿದ್ದಾರೆ.

'ಸಂಪ್ರದಾಯಗಳು', 'ಜನಪದ ಸಾಹಿತ್ಯವಲೋಕನ' ಮತ್ತು 'ಕಲಾರಾಶಿ' – ಮೂರು ವಿಭಾಗಗಳಲ್ಲಿ 'ಗದ್ದಗಿಮಠದ ಬರಹಗಳು' ಸಂಕಲಿತವಾಗಿದೆ. ಇದು ಇವರ ಸಂಶೋಧನ ಗ್ರಂಥವಾಗಿದೆ.

ಕೃಷಿ ಕಾರ್ಯದ ಹಿನ್ನೆಲೆಯಲ್ಲಿ ಜನಪದ ಸಂಪ್ರದಾಯಗಳನ್ನು ಪರಿಚಯಿಸುತ್ತಾರೆ. ಹುತ್ತಪ್ಪ, ಗಣಪತಿ, ಜೋಕುಮಾರ, ಬನ್ನಿ ಹಬ್ಬ (ವಿಜಯ ದಶಮಿ), ಶೀಗೆ, ಹಟ್ಟಿಹಬ್ಬ (ದೀವಳಿಗೆ), ಗೌರಿ, ಗುಡಿಹುಣ್ಣಿವೆ, ಹೋಳಿಹಬ್ಬ, ಶಿವರಾತ್ರಿ, ಯುಗಾದಿ, ಕಾರಹುಣ್ಣಿವೆ, ಗುರ್ಚಿ, ಗುಳ್ಳವ್ವ ಹಾಗೂ ಮಣ್ಣೆತ್ತು, ಗೊಂದಲಿಗರು, ದುರಗಮುರಗಿಯರು... ಇತ್ಯಾದಿ ಗ್ರಾಮೀಣ ಸಂಸ್ಕೃತಿಗೆ ಸಂಬಂಧಪಟ್ಟ ಜಾನಪದ ಹಬ್ಬ ಹರಿದಿನ, ಆಚರಣೆ–ಸಂಪ್ರದಾಯಗಳನ್ನು 'ಸಂಪ್ರದಾಯಗಳು' ಭಾಗದಲ್ಲಿ ಜನಪದ ಹಾಡು, ಗಾದೆ, ನುಡಿಗಟ್ಟುಗಳ ಆಧಾರದಿಂದ ಚರ್ಚಿಸುತ್ತಾರೆ; ಶೋಧನಾತ್ಮಕ ಅಧ್ಯಯನದ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ.

2ನೆಯದಾದ 'ಜನಪದ ಸಾಹಿತ್ಯಾವಲೋಕನ' ವಿಭಾಗದಲ್ಲಿ ಜನಪದ ಸಾಹಿತ್ಯದ ಅಧ್ಯಯನ ಪಾಶ್ಚಾತ್ಯರಲ್ಲಿ–ಭಾರತದಲ್ಲಿ ಕರ್ನಾಟಕದಲ್ಲಿ ನಡೆದುದರ ಪರಿಚಯ ಮಾಡಿಕೊಡುತ್ತಾರೆ. ಮುಂದೆ ಕನ್ನಡ ಜನಪದ ಸಾಹಿತ್ಯ ಸಂಪತ್ತನ್ನು ಕಥೆ, ಹಾಡುಗಬ್ಬ, ಬಿಡಿಹಾಡುಗಳು ಅಥವಾ ಜನಪದ ಭಾವಗೀತೆಗಳು, ಬೆಳುವಲದ ಜನಪದ ಗೀತಗಳು, ಕಿತ್ತೂರು ಇತಿಹಾಸ ಬಿಂಬಿಸುವ ಹಾಡುಗಳು, ಕನ್ನಡ ಹಾಡುಗಬ್ಬಗಳು, ಕನ್ನಡ ಲಾಲಿ ಜೋಗುಳಗಳು, ಕನ್ನಡ ಬಯಲಾಟ–ಮೂಡಲಪಾಯು, ದೊಡ್ಡಾಟ, ಯಕ್ಷಗಾನ, ಪಾರಿಜಾತ, ದಿಮ್ಮದ ಆಟಗಳು, ಧರ್ಮ, ವೀರಶೈವ, ವಚನಗಳು, ಬೆಡಗು, ಓದುಗಬ್ಬ, ಅನುಭವ ಪದಗಳು, ತ್ರಿಪದಿ ಕನ್ನಡ ಛಂದಸ್ಸಿಗೆ ಓಂಕಾರ, ಇತ್ಯಾದಿ ವಿಷಯಗಳನ್ನು ಸಂಶೋಧನಾತ್ಮಕ ನೆಲೆಯಲ್ಲಿ ವಿಮರ್ಶಿಸಿದ್ದಾರೆ.

ಕೊನೆಯದಾಗಿ, 'ಕಲಾರಾಶಿ' ವಿಭಾಗದಲ್ಲಿ ಲಿಪಿಗಲ್ಲು, ವೀರಗಲ್ಲು, ಗಡಿಗಲ್ಲು, ಕಂಬಿಗಲ್ಲು, ಬೋರೆಗಲ್ಲು ತಂಟೆಯ ಕಲ್ಲು, ಸಾಕ್ಷಿಯ ಕಲ್ಲು, ಕೂಗುಗಲ್ಲು, ತಕ್ಕಡಿ-ಕೋಲುಗಲ್ಲು, ಮದಗಗಲ್ಲು, ಪುಷ್ಪಕಲ್ಲು, ಕೋಟಿಕಲ್ಲು, ಮೊದಲಾದ ನೆಟ್ಟಗಲ್ಲುಗಳು, ಅಲ್ಲದೆ ಬಂಡೆಗಲ್ಲು, ರೇಖಾಚಿತ್ರಗಳ ಬಂಡಿಗಲ್ಲುಗಳು, ಗವಿ-ಗಹ್ವರ-ಕಲ್ಪನೆ-ಗುಡಿ-ಗೋಪುರಗಳು, ಸಿಡಿಬಂಡಿ-ಸಿಡಿಗಂಬಗಳು, ಮಾಸತಿಕಲ್ಲುಗಳು ಇತ್ಯಾದಿ ಇನ್ನೂ ಅನೇಕ ಉತ್ತರ ಕರ್ನಾಟಕದ ಕಲ್ಲುಗಳ ಚಾರಿತ್ರಿಕ ಪರಿಚಯವನ್ನು ಕೊಟ್ಟಿದ್ದಾರೆ. ಊರೂರಿಗೆ ಅಡ್ಡಾಡಿ ಇಲ್ಲಿಯ ಎಲ್ಲ ಕಲ್ಲುಗಳನ್ನು ನೋಡಿ, ವಿಚಾರಿಸಿ, ಅಧ್ಯಯನಿಸಿ ಬರೆದಿದ್ದಾರೆ. ಇಲ್ಲಿಯ ಪ್ರತಿಯೊಂದು ಕಲ್ಲು ಕನ್ನಡ ಇತಿಹಾಸ, ಸಂಸ್ಕೃತಿ, ಪರಂಪರೆಯನ್ನು ಕೂಗಿ ಕೂಗಿ ಹೇಳುತ್ತಿವೆ. ಇಂಥ ನೆಟ್ಟಗಲ್ಲುಗಳ ಬಗೆಗೆ ಗದ್ದಗಿಮಠರು ಶಾಸನ, ಇತಿಹಾಸ, ಕಾವ್ಯ, ಪುರಾಣ ಮತ್ತು ಜನಪದವನ್ನು ಆಧರಿಸಿ ಸ್ವಾರಸ್ಯಕರವಾಗಿ ಬರೆದಿದ್ದಾರೆ.

'ಅಳಿದುಳಿದ ಪುಲಿಗೆರೆ' ಕುರಿತೂ ಐತಿಹಾಸಿಕ ವಿವರಗಳೊಂದಿಗೆ ಬರೆಯುತ್ತಾರೆ. ಕರ್ನಾಟಕ ಜನಪದ ಕಲೆ, ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನಾಟಕ, ನೃತ್ಯ, ವಾದ್ಯಾದಿಗಳ ಪರಿಚಯ, ಆಟ-ಕುಣಿತಗಳು, ಹಳ್ಳಿಗರ ಕಾವ್ಯಾಭಿರುಚಿ ಕುರಿತೂ ಕುತೂಹಲಕಾರಿ ಸಂಗತಿಗಳನ್ನು ಬಿಚ್ಚಿಡುತ್ತಾರೆ.

ಈ ಮೂರು ವಿಭಾಗಗಳಲ್ಲಿಯ ಎಲ್ಲ ಬರೆಹಗಳು ಸಂಕ್ಷಿಪ್ತವಾಗಿದ್ದರೂ, ಶೋಧನಾತ್ಮಕ ನೆಲೆಯಲ್ಲಿ ಚರ್ಚಿಸಲ್ಪಟ್ಟು ಹೊಸ ವಿಷಯ ಸಂಗತಿ ಅರುಹುಗಳೊಂದಿಗೆ ಓದುಗನ ಕುತೂಹಲ ಮತ್ತು ಸಂತೋಷಕ್ಕೆ ಕಾರಣವಾಗಿವೆ. ಈ ಸಂಶೋಧನ ಲೇಖನಗಳು ಅವರೊಬ್ಬ ಜನಪದ ಸಾಹಿತ್ಯದ ತಜ್ಞ-ವಿದ್ವಾಂಸರೆಂದು ಸಾರಿ ಹೇಳುತ್ತವೆ. ಜನಪದ ಸಾಹಿತ್ಯಾಧ್ಯಯನಕ್ಕೆ ಅವರು ಹಾಕಿಕೊಟ್ಟ ಮಾರ್ಗಸೂಚಿ ಅನುಕರಣೀಯ.

೨. **ಗದ್ದಗಿಮಠರ ಮನೆತನ :** "ಗದ್ದಗಿಮಠರ ಮನೆತನವೇ ಜಾನಪದ ಗೀತಗಳ ಮಹಾಕೋಶವಾಗಿತ್ತು" (ಕನ್ನಡ ಜಾನಪದ ಗೀತಗಳು, ಮುನ್ನುಡಿಯಲ್ಲಿ). ಇವರ ಧರ್ಮಪತ್ನಿ ಅನಸೂಯಾದೇವಿ ಅವರು ತ್ರಿಪದಿಗಳನ್ನು ನೂರೊಂದು ರಾಗದಲ್ಲಿ ಹಾಡುವ ಕಲೆಯನ್ನು ತಮ್ಮ ಅತ್ತೆ ಶಿವಲಿಂಗಮ್ಮನಿಂದ ರೂಢಿಸಿಕೊಂಡಿದ್ದರು; ಪುತ್ರಿ ಅಕ್ಕಮಹಾದೇವಿ ಕೂಡ ಹಾಡುತ್ತಾರೆ. ಧಾರವಾಡ ಆಕಾಶವಾಣಿಯಲ್ಲಿಯೂ ಹಲವಾರು ಬಾರಿ ಜಾನಪದ ಹಾಡುಗಳನ್ನು ಹಾಡಿದ್ದಾರೆ. ವೃತ್ತಿಯಿಂದ ವಿಜ್ಞಾನ ಪ್ರಾಧ್ಯಾಪಿಕೆಯಾಗಿರುವ ಇವರು ತಾಯಿಯಿಂದ ಬಳುವಳಿಯಾಗಿ ಬಂದ ಹಾಡುಗಾರಿಕೆಯನ್ನು ಹಲವು ವಿಶಿಷ್ಟ ಸಂದರ್ಭಗಳಲ್ಲಿ ಈಗಲೂ ಹಾಡುತ್ತಾರೆ. ಅನಸೂಯಾದೇವಿ ಅವರು ಪತಿಯ ಸುಖ-ದುಃಖದಲ್ಲಿ ಭಾಗಿಯಾದವರು. ಪತಿಯ ಧ್ಯೇಯೋದ್ದೇಶ-ಏಳ್ಗೆ ತನ್ನದೆಂದೇ ಭಾವಿಸಿದವರು. ಅಂತೆಯೇ ಅವರೊಂದಿಗೆ ಜನಪದ ಸಾಹಿತ್ಯದ ಗೀಳು ತಗುಲಿಸಿಕೊಂಡು, ಹಳ್ಳಿ ಹಳ್ಳಿ ತಿರುಗಾಡಿದರು. ರಾಮದುರ್ಗ ತಾಲ್ಲೂಕಿನ ಕಟಕೋಳ ಗ್ರಾಮದ ಚರಂತಿಮಠ ಇವರ ತವರುಮನೆ. ಇವರಿಗೆ ಸಾವಳಿಗಯ್ಯ (ಬಾಬಣ್ಣ), ರುದ್ರಯ್ಯ, ಪುಲಿಕೇಶಿ, ನಿಜಗುಣಿ ಮತ್ತು ಅಕ್ಕಮಹಾದೇವಿ – ಐದು ಜನ ಮಕ್ಕಳು. ಪತಿ ಅಸ್ತಮಿಸಿದಾಗ ಮಕ್ಕಳೆಲ್ಲ ಅತ್ಯಂತ ಚಿಕ್ಕವರು. ಅನಸೂಯಾದೇವಿ ಮಕ್ಕಳನ್ನು ತುಂಬ ಕಷ್ಟದಿಂದ ಚೆನ್ನಾಗಿ ಬೆಳೆಸಿದ್ದಾರೆ. ಒಳ್ಳೆಯ ಸಂಸ್ಕಾರ ನೀಡಿದ್ದಾರೆ. ವಿದ್ಯಾವಂತರನ್ನಾಗಿಸಿದ್ದಾರೆ. ಜೀವನದ ಮಾರ್ಗತೋರಿದ್ದಾರೆ. ಅನಸೂಯಾದೇವಿ ಅವರು 24-01-1983 ರಂದು ಲಿಂಗೈಕ್ಯರಾದರು.

ಗದ್ದಗಿಮಠರ ದೇಹದಾರ್ಢ್ಯ ಚೆನ್ನಾಗಿ ಇತ್ತು. ಮೈಬಣ್ಣ ಕಪ್ಪು. ವ್ಯಾಯಾಮದಿಂದ ಗಟ್ಟಿಮುಟ್ಟಾದ ಶಾರೀರ ಹೊಂದಿದ್ದರು. ಒಳ್ಳೆಯ

ಪೈಲ್ವಾನ್‌ರಾಗಿದ್ದರು. ಇವರಿಗೆ ಕುಸ್ತಿ-ಕಸರತ್ತಿನ ಜನಪದ ಕಲೆಯಲ್ಲಿ ಆಸಕ್ತಿ ಮತ್ತು ಉತ್ಸಾಹ. ಅನೇಕ ಬಯಲುಗಣ ಕುಸ್ತಿಗಳನ್ನು ಆಡಿರಬೇಕು. 'ಕರ್ನಾಟಕದ ಕಪ್ಪು ಪೈಲವನ್' ಎಂಬ ಪ್ರಶಸ್ತಿಯನ್ನು ಆಗಿನ ಮುಂಬಯಿ ರಾಜ್ಯದ ಕಾಂದಿವಲಿಯಲ್ಲಿ ಪಡೆದಿದ್ದಾರೆ. ಅಜ್ಜಿ-ತಂದೆ-ತಾಯಂದಿರಿಂದ ಜನಪದ ಸಾಹಿತ್ಯದ ಗೀಳಿಗೆ ಒಳಗಾದ ಗದ್ದಗಿಮಠರು ಜನಪದ ಸಾಹಿತ್ಯದ ವಿದ್ವಾಂಸರೆನಿಸಿದರು. ಅಧ್ಯಾಪಕ ವೃತ್ತಿಯನ್ನು ತೊರೆದು ಕೃಷಿ ಕಾರ್ಯಕ್ಕೆ ತೊಡಗಿದರು. ಸ್ವತಃ ಉಳುಮೆಮಾಡಿ ಬೆಳೆ ಬೆಳೆದರು. ತಮ್ಮೂರು ಕೆರೂರಿನ 18 ಎಕರೆ ಜಮೀನಿನಲ್ಲಿ 120 ಚೀಲ ಗೋಧಿ ಬೆಳೆದ ಸಾಹಸಿ ಇವರು; ಟೊಮ್ಯಾಟೊ, ಮೆಣಸಿನಕಾಯಿ ಕೂಡ ಬೆಳೆದರು (ಗುರುಲಿಂಗ ಕಾಪಸೆ).

೮. **ಹಿರಿಯ ಸಾಧನೆಗೆ ಮೆಚ್ಚಿಕೆ** : ಡಾ. ಬಿ.ಎಸ್. ಗದ್ದಗಿಮಠರು ತಮ್ಮ ಬದುಕಿನ ಅತ್ಯಂತ ಅಲ್ಪಕಾಲಾವಧಿಯಲ್ಲಿ ಗೈದ ಹಿರಿಯ ಸಾಧನೆಯನ್ನು ನಾಡಿನ ವಿದ್ವಾಂಸ ಚಿಂತಕರು ಮೆಚ್ಚಿಕೊಂಡು ಪ್ರಶಂಸಿಸಿದ್ದಾರೆ. ಜನಪದ ಸಾಹಿತ್ಯ-ಸಂಸ್ಕೃತಿ, ಕಲೆಗಳ ಬಗೆಗೆ ಅಪಾರ ಜ್ಞಾನಾನುಭವ ಹೊಂದಿದ ಗದ್ದಗಿಮಠರು ಅವನ್ನು ಹಳ್ಳಿಗರಿಗೆ ತಿಳಿಸಿಹೇಳುತ್ತಿದ್ದರು; ತಮ್ಮ 'ಚೋಪಡಿ' ಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು; ಅಧ್ಯಯನಿಸುತ್ತಿದ್ದರು. ಬೇಂದ್ರೆಯವರಂಥ ಕವಿ ಇವರಲ್ಲಿರುವ ಅಪಾರವಾದ ಜಾನಪದ ವಾಙ್ಮಯ ಸರಕನ್ನು ಕಂಡು ಮೆಚ್ಚಿದ್ದುಂಟು. ಚೆನ್ನವೀರಕಣವಿ, ಎಂ.ಎಂ. ಕಲಬುರ್ಗಿ, ಜೀ.ಶಂ. ಪರಮಶಿವಯ್ಯ, ಎಸ್.ಎಂ. ವೃಷಭೇಂದ್ರಸ್ವಾಮಿ, ಗುರುಲಿಂಗ ಕಾಪಸೆ, ಈಶ್ವರ ಚಂದ್ರ ಚಿಂತಾಮಣಿ, ಕೊತ್ತಲ ಮಹಾದೇವಪ್ಪ, ಸೋಮೇಶ್ವರ ಇಮ್ರಾಪುರ, ಎಸ್.ಬಿ. ನಾಯಕ, ಚೆಕ್ಕೆರೆ ಶಿವಶಂಕರ, ಡಿ. ಲಿಂಗಯ್ಯ, ಎಂ.ಎಸ್.

ಸುಂಕಾಪುರ, ಸ.ಸ. ಮಾಳವಾಡ, ಡಿ.ಸಿ. ಪಾವಟೆ, ಚಂದ್ರಶೇಖರ ಕಂಬಾರ ಮುಂತಾದವರು ಈ ಕಿರಿಯನ ಹಿರಿಯ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದುಂಟು. ಆದರ್ಶ ಶಿಕ್ಷಕ, ದಕ್ಷ ಆಡಳಿತಗಾರ, ಶ್ರೇಷ್ಠವಾಗ್ಮಿ, ಕುಸ್ತಿಪಟು, ಪ್ರಗತಿಪರ ಚಿಂತಕ, ಜನಪದ ವಿದ್ವಾಂಸರಾಗಿ ತಮ್ಮ ವ್ಯಕ್ತಿವೈಶಿಷ್ಟ್ಯದಿಂದ ಕಂಗೊಳಿಸುತ್ತಿರುವ ಬಿ.ಎಸ್. ಗದ್ದಗಿಮಠ ಅವರು ಪ್ರಾಮುಖ್ಯವಾಗಿ ಜನಪದ ಸಾಹಿತ್ಯಾಗಸದಲ್ಲಿ ಮಿನುಗುವ ನಕ್ಷತ್ರವಾಗಿದ್ದಾರೆ. ಇವರು ಜನಪದ ಸಂಕಲನ-ಮಹಾಪ್ರಬಂಧ-ಸಂಶೋಧನಾತ್ಮಕ ಬಿಡಿ ಬರೆಹಗಳ ಜತೆಗೆ ಜನಪದ ಸಾಹಿತ್ಯದ ಕತೆ, ಗಾದೆ, ಒಗಟು, ಒಡಪು, ಒಡಬುಗಳ ಸಂಕಲನ ಕಾರ್ಯವನ್ನು ಕೈಕೊಳ್ಳುವ ಸಾಧ್ಯತೆಯಿತ್ತು. ಆದರೆ ಅಷ್ಟರಲ್ಲಿಯೇ ಲಿಂಗೈಕ್ಯರಾದುದು ಜಾನಪದಕ್ಕೆ ಭರಿಸಲಾರದ ನಷ್ಟವಾಯಿತು. ಗದ್ದಗಿಮಠರು ಇಂದು ಇಲ್ಲವಾದರೂ ಅವರು ಗೈದ ಸಾಧನೆ-ಸಂಪಾದನೆ ಜನಪದ ಲೋಕಕ್ಕೆ ಅಮೃತನಿಧಿಯಾಗಿದೆ ಎಂಬುದು ಬಹುತೇಕ ಜನಪದ ವಿದ್ವಾಂಸರ ಅಭಿಪ್ರಾಯ.

೯. **ಗದ್ದಗಿಮಠರ ಕನಸು :** ಗದ್ದಗಿಮಠರು ಜನಪದ ಸಾಹಿತ್ಯ ಕುರಿತು ಅದಾವ ಕನಸು ಕಂಡಿದ್ದರೊ ಯಾರಿಗೆ ಗೊತ್ತು! ಕನಸು ನನಸಾಗುವ ಮುನ್ನವೇ ಕಣ್ಮುಚ್ಚಿದ್ದು ಕಣ್ಣೀರಿಡುವ ಸಂಗತಿಯಾಗಿ ಹೋಯಿತು. ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ಇವರು ತುಂಬ ಕಷ್ಟ ಪಟ್ಟಿದ್ದಾರೆ; ಸಾಧ್ಯವಾದಷ್ಟನ್ನು ಉಳಿಸಿಹೋಗಿದ್ದಾರೆ; ಆ ಮೂಲಕ ಚಿರಸ್ಮರಣೀಯರಾಗಿದ್ದಾರೆ.

ಗೊಂದಲಿಗರ ಸಾಹಿತ್ಯ, ರಿವಾಯಲ್ ಹಾಡು, ಯಮನೂರ ಪೀರನ ಹಾಡು, ತೊರಗಲ್ಲ ಪೀರನ ಹಾಡು, ಯಲ್ಲವ್ವನ ಹಾಡು,

ಗೊಗ್ಗಯ್ಯ (ಮೈಲಾರಲಿಂಗ)ನ ಹಾಡುಗಳನ್ನು, ಜನಪದ ಕಥೆಗಳನ್ನು ಸಂಕಲಿಸಿ ದೀರ್ಘಮುನ್ನುಡಿಯೊಡನೆ ಪ್ರಕಟಿಸಬೇಕು; ಜನಪದ ಶಬ್ದಕೋಶ ಸಿದ್ಧವಾಗಬೇಕು; ಎಂಬಂತಹ ಕನಸು ಗದ್ದಗಿಮಠರದಾಗಿತ್ತು. ಈ ಜವಾಬ್ದಾರಿಯುತ ಕಾರ್ಯವನ್ನು ಜನಪದ ಸಂಶೋಧಕರು ಪರಿಶ್ರಮದಿಂದ ಮಾಡಬೇಕೆಂಬ ಸೂಚನೆಯನ್ನು, ಶುಭ ಹಾರೈಕೆಯನ್ನು ಗದ್ದಗಿಮಠರು ತಿಳಿಸಿದ್ದುಂಟು (ಕನ್ನಡ ಜಾನಪದ ಗೀತಗಳು – 'ಶುಭಮಂಗಳ' ದಲ್ಲಿ).

'ಜನಪದ ಸಾಹಿತ್ಯ ನಮ್ಮ ಸಂಸ್ಕೃತಿಯನ್ನು ನಾಡಿನಾಡಿಗಳಲ್ಲಿ ಹರಿಸಿ ನಮ್ಮ ಜೀವನಕ್ಕೆ ಹೊಸ ಬೆಳಕು ತಂದು ಕೊಟ್ಟದ್ದಾದರೆ ಅದೇ ಭರತಖಂಡದ ಭಾಗ್ಯೋದಯ' ಎಂಬಂತಹ ಗದ್ದಗಿಮಠರ ಮಾತುಗಳು ಜಾಗತೀಕರಣದ ಈ ಸಂದರ್ಭದಲ್ಲಿ ಮನನೀಯ.

ಅಪಾರವಾದ ಜನಪದ ಸಾಹಿತ್ಯವನ್ನು, ಕೊಡದಲ್ಲಿ ಸಾಗರವನ್ನು ಹಿಡಿದಿಟ್ಟಂತೆ, ಕರಿಯನ್ನು ಕನ್ನಡಿಯಲ್ಲಿ ತೋರಿದಂತೆ, ತೆರೆದು ತೋರುವ ಮಹತ್ ಸಾಹಸವನ್ನು 'ಕನ್ನಡ ಜಾನಪದ ಗೀತ' ಗಳಲ್ಲಿ ಮಾಡಿದ್ದಾರೆ. ಬೆಟ್ಟದಷ್ಟು ಕೆಲಸವನ್ನು ಜನಪದದಲ್ಲಿ ಮಾಡಿದ್ದರೂ 'ನನ್ನದು ಅಳಿಲು ಸೇವೆ' ಎನ್ನುವ ವಿನೀತಭಾವ ಗದ್ದಗಿಮಠರದ್ದು. ಜನಪದ ಸಾಹಿತ್ಯದ ಉಳಿದ ಮಹತ್ವದ ಬಹಳಷ್ಟು ಕೆಲಸದ ಜವಾಬ್ದಾರಿಯನ್ನು ಮುಂದಿನ ಸಂಶೋಧಕರ, ವಿಮರ್ಶಕರ ಹೆಗಲಿಗೇರಿಸಿ ಬಾರದಲೋಕಕ್ಕೆ ಗದ್ದಗಿಮಠರು ಹೋದರು.

* * *

ಕನ್ನಡ ಜಾನಪದ ಕ್ಷೇತ್ರದಲ್ಲಿ ಹಲವು ಪ್ರಥಮಗಳನ್ನು ಸ್ಥಾಪಿಸಿದ ಡಾ. ಬಿ.ಎಸ್. ಗದ್ದಗಿಮಠರು ಮರೆಯದ ಮಹನೀಯರು. ಅವರು ಜಾನಪದದಲ್ಲಿ ಮೊದಲು ಪಿಎಚ್.ಡಿ ಪದವಿ ಪಡೆದವರು; ಅಧಿಕ ಸಂಖ್ಯೆಯಲ್ಲಿ ಚಾರಿತ್ರಿಕ ಕಥನ ಕವನಗಳನ್ನು ಸಂಗ್ರಹಿಸಿದವರು; ಉತ್ತರ ಕರ್ನಾಟಕದ ಬಹುಭಾಗಗಳಲ್ಲಿ ಸಂಚರಿಸಿ ಗಾಯನ, ಭಾಷಣಗಳಿಂದ ಜನಪದ ಗೀತ ಸಾಹಿತ್ಯದ ಪ್ರಚಾರ ಮಾಡಿದವರು; ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಅಧ್ಯಯನ, ವರ್ಗೀಕರಣ, ವಿಶ್ಲೇಷಣೆಯಲ್ಲಿ ದೇಸಿಮಾರ್ಗವನ್ನು ಸೂಚಿಸಿದವರು; ಜನಪದ ಸಾಹಿತ್ಯೇತರ ವಸ್ತು ವಿಷಯದ ಮೀಮಾಂಸೆಯ ಕಡೆಗೆ ಗಮನ ಸೆಳೆದವರು. ಜಾನಪದದ ಸ್ಪಷ್ಟ ಕಲ್ಪನೆಯಿಲ್ಲದ ಕಾಲದಲ್ಲಿ, ಏಕಾಂಗಿಯಾಗಿ ಅವರು ಮಾಡಿದ ಸಾಧನೆ ಅನನ್ಯವಾದದ್ದು.

ಕನ್ನಡದ ಗಮನಾರ್ಹ ಲೇಖಕರಾದ ಡಾ. ಸಿ.ಕೆ. ನಾವಲಗಿಯವರು ಈ ಪುಟ್ಟಗ್ರಂಥದ ಕರ್ತೃವಾಗಿದ್ದಾರೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು,**
ಬೆಂಗಳೂರು